ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 1 | ಜನವರಿ 6, 1980 | 40 ಪೈಸೆ

ಚುನಾವಣೆಯ ನಂತರ ಏನು ?

ಈ ಸಂಚಿಕೆ ಓದುಗರ ಕೈಯಲ್ಲಿ ಸಿಗುವಾಗ ದೇಶಾದ್ಯಂತ ಎರಡನೇ ಹಂತದ ಮತದಾನವೂ ಮುಗಿಯಲಿದೆ. ಪ್ರಥಮ ಹಂತದ ಚುನಾವಣೆಯಲ್ಲಿ ಸುಮಾರು ಶೇಕಡಾ 50 ರಷ್ಟು ಮತದಾನ ನಡೆದದ್ದು ನೋಡಿದರೆ ಮತದಾನದ ಬಗ್ಗೆ ಜನತೆಯಲ್ಲಿ ಆಸಕ್ತಿ ಕಡಿಮೆಯಾಗಿರುವುದು ಕಂಡುಬರುತ್ತದೆ.

ಈ ಚುನಾವಣೆಯಲ್ಲಿ ಎಲ್ಲ ಪಕ್ಷಗಳೂ ಬಿರುಸಿನ ಪ್ರಚಾರ ನಡೆಸಿವೆ. ಕೆಲವು ಕಡೆಯಲ್ಲಿ ಮಾತ್ರ ಕಹಿಯಾದ ಘಟನೆಗಳು ನಡೆದಿದ್ದರೂ ಚುನಾವಣೆಯು ಒಟ್ಟಿನಲ್ಲಿ ಶಾಂತರೀತಿಯಲ್ಲೇ ನಡೆದಿದೆ ಎನ್ನಬಹುದು.

ಈಗ ನಡೆವ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ದೊರೆಯುವುದು ಅಸಂಭವವೆಂದು ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳೂ ಬರೆದಿವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಆದ್ದರಿಂದ ಸರಕಾರ ರಚಿಸುವ ಕೆಲಸವೂ ಮುಂದೆ ಒಂದು ದೊಡ್ಡ ಸಮಸ್ಯೆಯಾಗಬಹುದಾಗಿದೆ. ಕಾಂಗ್ರೆಸ್ (ಯು) ಮತ್ತು ಲೋಕದಳಗಳ ಮೈತ್ರಿಯು ಕೊನೆಗೊಂಡುದರಿಂದ ಈ ಸಮಸ್ಯೆಯು ಇನ್ನೂ ತೀವ್ರಗೊಂಡಿದೆ.

ಸಂಪಾದಕೀಯ

ಒಂದಂಶ ಮಾತ್ರ ಸ್ಪಷ್ಟವಾಗಿದೆಯೆನ್ನಬಹುದು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಲವು ಹೊಸ ಲೋಕಸಭೆಯಲ್ಲಿ ಅಧಿಕಗೊಳ್ಳುವುದು ಮತ್ತು ಎಡ ಪಕ್ಷಗಳ ಸಂಖ್ಯೆಯೂ (ಸಿ. ಪಿ. ಎಂ. ಸೇರಿ) ಗಣನೀಯವಾಗಿ ಅಧಿಕಗೊಳ್ಳುವುದರಲ್ಲಿ ಸಂಶಯವಿಲ್ಲ. ಈ ಎಡ ಪಕ್ಷಗಳು ಮುಂದಿನ ಲೋಕಸಭೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ಇದು ಮಹತ್ವದ ಬೆಳವಣಿಗೆಯಾಗಲಿದೆ.

ಈಗ ನಮ್ಮ ದೇಶವು ತೀವ್ರವಾದ ಆರ್ಥಿಕ ಮುಗ್ಗಟ್ಟನ್ನೆದುರಿಸುತ್ತಿದೆ. ಅದಿನ್ನೂ ತೀವ್ರವಾಗಲಿದೆ. ಇದಕ್ಕೆ ಈವರೆಗೆ ಭಾರತ ಸರಕಾರ ಅನುಸರಿಸಿಕೊಂಡು ಬಂದ ಬಂಡವಾಳಶಾಹಿ ಪಥದ ಬೆಳವಣಿಗೆಯೇ ಕಾರಣ. ದೇಶದ ಅಭಿವೃದ್ಧಿಗೆ ಈ ನೀತಿಯನ್ನು ಬದಲಾವಣೆ ಮಾಡದೆ ಸಾಧ್ಯವೇ ಇಲ್ಲ. ಇಷ್ಟು ದಿವಸ ಈ ಆರ್ಥಿಕ ಮುಗ್ಗಟ್ಟಿನ ಹೊರೆಯನ್ನು ಸಾಮಾನ್ಯ ಜನತೆಯ ಮೇಲೆ ಹೊರಿಸಲಾಯಿತು. ನಮ್ಮ ದೇಶದ ರೈತರೂ, ಕಾರ್ಮಿಕರೂ, ನೌಕರರೂ, ಇತರ ಜನ ವಿಭಾಗದವರೂ ಮುಂದಿನ ಕಾಲ ಘಟ್ಟದಲ್ಲಿ ಇವರ ವಿರುದ್ಧ ತೀವ್ರ ಹೋರಾಟ ನಡೆಸಬೇಕಾಗುತ್ತದೆ. ಮೂಲಭೂತ ಬದಲಾವಣೆಗೆ ಹೋರಾಡಲು ಸಿದ್ಧರಾಗಬೇಕಾಗಿದೆ. ಈ ಚಾರಿತ್ರಿಕ ಹೋರಾಟಕ್ಕೆ ಎಡ ಪಕ್ಷಗಳು ಮಾರ್ಗದರ್ಶನ ನೀಡಲೆಂದು ನಮ್ಮ ಹಾರೈಕೆ.

●

ದೇವಿಕಾರಾಣಿ ವಿರುದ್ಧ ಮತ ಪ್ರದರ್ಶನ

ನೂರು ಜನರ ಬಂಧನ

ಕಳೆದ ಐದು ತಿಂಗಳಿಂದ ಹೋರಾಟ ನಡೆಸುತ್ತಿರುವ ತಾತಗುಣಿ ಎಸ್ಟೇಟ್ ಕಾರ್ಮಿಕರ ಹೋರಾಟ ಇನ್ನೂ ಪರಿಹಾರ ಕಂಡಿಲ್ಲ. ದೇಶದ ಪ್ರಖ್ಯಾತ ಕಲಾವಿದೆ ಹಾಗೂ ವಿಶ್ವಕವಿ ರವೀಂದ್ರನಾಥ ಟಾಗೋರರ ಮೊಮ್ಮಗಳು ಶ್ರೀಮತಿ ದೇವಿಕಾರಾಣಿ ರೋರಿಚ್‌ರವರ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ನೂರ ಐವತ್ತು ಜನ ಕಾರ್ಮಿಕರಿಗೆ ಸಿಗುವದು ದಿನಕ್ಕೆ ಎರಡು ರೂಪಾಯಿ ಅಥವಾ ಎರಡೂವರೆ ರೂಪಾಯಿ. ಹೊರಗಿನ ಪ್ರಪಂಚಕ್ಕೆ ಪ್ರಶಸ್ತಿ, ಕೀರ್ತಿ, ಹಣ, ಗೌರವವುಳ್ಳ ದೇವಿಕಾರಾಣಿ ಮತ್ತವರ ಪ್ರಸಿದ್ಧ ಕಲಾವಿದ ಪತಿ ರೋರಿಚ್ ನಡೆಸುತ್ತಿರುವ ಶೋಷಣೆ ಮಾತ್ರ ಯಾರಿಗೂ ತಿಳಿಯದಾಗಿದೆ. ಎಸ್ಟೇಟಿನಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ ಹೆಚ್ಚಿನವರು ಮಹಿಳೆಯರು, ಅದರಲ್ಲೂ ಹರಿಜನರು. ಮತ್ತೊಂದು ದುರಂತವೆಂದರೆ ದೇವಿಕಾರಾಣಿಯವರು ಪ್ರಖ್ಯಾತಿ ಪಡೆದು ಮೇಲೆಬಂದ ಚಿತ್ರದ ಹೆಸರು "ಅಚೂತ್ ಕನ್ಯಾ" (ಹರಿಜನ ಕನ್ಯೆ). ಆದರೆ ವಾಸ್ತವದಲ್ಲಿ ನಡೆಸುತ್ತಿರುವುದು ಹರಿಜನರ ಮೇಲೆ ಮಿತಿ ಮೀರಿದ ದೌರ್ಜನ್ಯ. ಚಿತ್ರಗಳಲ್ಲಿ ಈ ಕಲಾವಿದರು ವ್ಯಕ್ತಪಡಿಸುವ ಸಾಮಾಜಿಕ ಕಳಕಳಿ, ಸಾರ್ವಜನಿಕವಾಗಿ ತೋರಿಕೆಗಾಗಿ ಮಾಡುವ ಭಾಷಣಗಳಿಗೂ ಅವರ ನಿಜ ಜೀವನಕ್ಕೂ ಎಷ್ಟು ವ್ಯತ್ಯಾಸವಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕಾರ್ಮಿಕರ ದುಡಿಮೆಯಿಂದ ವರ್ಷಕ್ಕೆ 45 ಲಕ್ಷ ರೂಪಾಯಿ ಲಾಭಗಳಿಸುವ ದೇವಿಕಾರಾಣಿ ಹಾಗೂ ರೋರಿಚ್‌ರವರು ಮಾಡುತ್ತಿರುವ ಶೋಷಣೆಯ ವಿರುದ್ಧ ತುರ್ತುಪರಿಸ್ಥಿತಿಯ ಕಾಲದಲ್ಲಿ ನಡೆಸಿದ ಹೋರಾಟಕ್ಕಾಗಿ ಕಾಂ. ಜಗನ್ನಾಥ್ ಹಾಗೂ ಕಾಂ. ಸೂರ್ಯನಾರಾಯಣರಾವ್ ಮೀಸಾ ಮೇಲೆ ಜೈಲಿಗೆ ಹೋಗಬೇಕಾಯಿತು.

ಈಗ ನಡೆಯುತ್ತಿರುವ ಹೋರಾಟ ಐದು ತಿಂಗಳು ಸಮೀಪಿಸುತ್ತಿದ್ದರೂ ಇದುವರೆಗೂ ಎಸ್ಟೇಟಿನ ಮಾಲೀಕರಾದ ದೇವಿಕಾರಾಣಿ ದಂಪತಿಗಳು ಕಾರ್ಮಿಕರ ಬೇಡಿಕೆಗಳನ್ನು ವಿಚಾರಿಸುವ ಗೋಜಿಗೇ ಹೋಗಿಲ್ಲ. ವಿಧಾನ

[ಕಡೆಯ ಪುಟ ನೋಡಿ]

ಮೈಕೋ ಕಾರ್ಮಿಕರ ಮಹತ್ತರ ವಿಜಯ

ಕಾರ್ಮಿಕರು ಯಾವಾಗ ಮುಷ್ಕರ ಮಾಡಿದರೂ ಬರೀ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಮಾಡುತ್ತಾರೆ ಎನ್ನುವುದು ಒಂದು ಸಾಮಾನ್ಯ ಆರೋಪ. ಆದರೆ, ಯಾವ ಆರ್ಥಿಕ ಬೇಡಿಕೆಗಳೂ ಇಲ್ಲದೆ; ಕಾರ್ಮಿಕರನ್ನು ಆಡಳಿತ ವರ್ಗದವರು ಮನುಷ್ಯರಂತೆ ನೋಡಬೇಕೆಂದು ಒತ್ತಾಯಿಸಿ ಮುಷ್ಕರ ಮಾಡಿದವರು ಮೈಕೋ ಕಾರ್ಖಾನೆಯ ಕಾರ್ಮಿಕರು. ಶ್ರಮಭಾರವನ್ನು ಕಡಿಮೆ ಮಾಡಬೇಕು, ಕಾರ್ಮಿಕರನ್ನು ಮನಸ್ಸಿಗೆ ಬಂದಂತೆ ವಜಾ ಮಾಡುವುದನ್ನು ನಿಲ್ಲಿಸಬೇಕೆಂದು ಆಡಳಿತ ವರ್ಗಕ್ಕೆ ಮಾಡಿದ ಮನವಿ ವಿಫಲವಾಗಿ, ಮತ್ತಷ್ಟು ಕಾರ್ಮಿಕರು ವಜಾ ಆದಾಗ ಮುಷ್ಕರ ಅನಿವಾರ್ಯವಾಯಿತು. ಇಷ್ಟು ಸಣ್ಣ ಬೇಡಿಕೆಗಳಿಗಾಗಿ, ಇಷ್ಟೊಂದು ದೊಡ್ಡ ಹೋರಾಟವೇ? ಎಂದು ಕೇಳುತ್ತಿದ್ದವರಿಗೆ ಕಂಡಿದ್ದು ಕೇವಲ ಪೋಲೀಸರು ಹಾಗೂ ಆಡಳಿತ ವರ್ಗದ ಬೇಹುಗಾರಿಕೆಗಳು ಬೆಂಗಳೂರು ನಗರದ ಮೂಲೆ, ಮೂಲೆಗಳಲ್ಲಿ ಮೈಕೋ ಕಾರ್ಮಿಕರ ಮುಷ್ಕರದ ಕಾರಣಗಳನ್ನು ವಿವರಿಸಲು ಸುಮಾರು ಮೂವತ್ತು ಬಹಿರಂಗ ಸಭೆಗಳು ಪ್ರದೇಶವಾರು ನಡೆದವು. ಗೂಂಡಾಗಳ ದಾಳಿಯಿಂದ ಕಾರ್ಮಿಕ ಸಂಘದ ಮುಖಂಡರನ್ನು ಹಾಗೂ ಕಾರ್ಮಿಕರನ್ನು ರಕ್ಷಿಸಲು ಸ್ವಯಂ ಸೇವಕ ತಂಡವನ್ನು ಮಾಡಬೇಕಾಯಿತು. ಗೂಂಡಾಗಳಿಂದ ಪೆಟ್ಟು ತಿಂದ ಸಂಘದ ಕಾರ್ಯದರ್ಶಿ ಕಾಂ. ನೀಲಕಂಠಯ್ಯ ಇನ್ನೂ ಪೂರ್ತಿಯಾಗಿ ಚೇತರಿಸಿಕೊಂಡಿಲ್ಲ.

ಮೈಕೋ ಕಾರ್ಮಿಕರ ಹೋರಾಟ, ಎಲ್ಲ ಕಾರ್ಮಿಕರ ಹೋರಾಟವೆಂದು ತಿಳಿದುಕೊಂಡ ಬೆಂಗಳೂರು ನಗರದ ಎಲ್ಲಾ ಪ್ರಮುಖ ಕಾರ್ಮಿಕ ಸಂಘಗಳು, ಮುಷ್ಕರವನ್ನು ಯಶಸ್ವಿಗೊಳಿಸಲು ಒಂದು ಸಮನ್ವಯ ಸಮಿತಿಯನ್ನು ಮಾಡಲಾಯಿತು. ಸಮನ್ವಯ ಸಮಿತಿಯ ಮುಂದಾಳುತ್ವದಲ್ಲಿ ಸರ್ಕಾರಕ್ಕೆ, ರಾಜ್ಯಪಾಲರಿಗೆ ನೀಡಿದ ಮನವಿ ಪತ್ರಗಳು, ದಿನದಿನಕ್ಕೆ ತೀವ್ರವಾಗುತ್ತಿದ್ದ ಪ್ರತಿಭಟನೆಗಳು ವಿಫಲವಾದಾಗ ಕೊನೆಗೆ ಜನಗಳ ಬೆಂಬಲ ಕೋರಿ ಬೆಂಗಳೂರು ಬಂದ್‌ಗೆ ಕರೆ ನೀಡಲಾಯಿತು.

ಬೆಂಗಳೂರು ಬಂದ್ :

ಹಿಂದೆಂದೂ ಕಾಣದ ರೀತಿಯಲ್ಲಿ ತಾ. 3-12-79ರಂದು ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ಬೆಂಗಳೂರು ಬಂದ್ ನಡೆಯಿತು. ಪೋಲೀಸರ ದಬ್ಬಾಳಿಕೆ, ಮಾಲೀಕರ ಏಜೆಂಟರ ಗೂಂಡಾಗಿರಿಗಳನ್ನೂ ಎದುರಿಸಿ ಬೆಂಗಳೂರು ಬಂದ್ ಯಶಸ್ವಿಯಾಯಿತು. ಬೆಂಗಳೂರು ಬಂದ್ ನಂತರ, ಮತ್ತೆ ಮಾತುಕತೆಗಾಗಿ ಪ್ರಯತ್ನ ಮಾಡಲಾಯಿತು. ಮೈಕೋ ಕಾರ್ಮಿಕರ ಸಂಘದ ಮುಖಂಡರ ಬಳಿ ಮಾತನಾಡುವುದಿಲ್ಲ, ಸಮನ್ವಯ ಸಮಿತಿಯವರೊಂದಿಗೆ ಮಾತನಾಡುವುದಾಗಿ ಆಡಳಿತ ವರ್ಗ ತಿಳಿಸಿತು. ಸಮನ್ವಯ ಸಮಿತಿಯ ಪ್ರತಿನಿಧಿಯೊಂದಿಗೆ ನಡೆಸಿದ ಮಾತುಕತೆಗಳೂ ವಿಫಲವಾಗಿತ್ತು.

ಈ ಮಧ್ಯೆ ಸರಕಾರ ಮಧ್ಯಪ್ರವೇಶ ಮಾಡಿ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವುದರ ಬದಲು, ಮುಷ್ಕರ ನಿಷೇಧಾಜ್ಞೆಯನ್ನು ಹೊರಡಿಸಿ, ವಿಷಯವನ್ನು ನ್ಯಾಯಾಲಯಕ್ಕೆ ಒಪ್ಪಿಸಿ ತೆಪ್ಪಗೆ ಕುಳಿತರು. ಸರಕಾರದ ವರ್ತನೆಯಿಂದ ಖುಷಿಯಾದ ಆಡಳಿತ ವರ್ಗ ಕೆಲಸಗಾರರ ಐಕ್ಯತೆಯನ್ನು ಒಡೆಯಲು ಒಂದುಕಡೆ ಗೂಂಡಾಗಿರಿ ಮತ್ತೊಂದು ಕಡೆ ಆಸೆ, ಆಮಿಷಗಳನ್ನು ತೋರಿಸಿ ಕಾರ್ಮಿಕರನ್ನು ಒಡೆಯಲು ಪ್ರಯತ್ನಿಸಲಾಯಿತು.

ಆದರೆ, ಇದಾವುದಕ್ಕೂ ಬಗ್ಗದ ಕಾರ್ಮಿಕರು ಮುಷ್ಕರ ಮುಂದುವರಿಸಿದಾಗ, ಆಡಳಿತ ವರ್ಗದವರು ಮುಂದೆ ದಾರಿ ಕಾಣದೆ ಮೈಕೋ ಕಾರ್ಮಿಕ ಸಂಘದ ಮುಖಂಡರೊಂದಿಗೆ ಮಾತುಕತೆ ನಡೆಸಲು ಮುಂದೆ ಬರಬೇಕಾಯಿತು. ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಬಳಿ ತಾವು ಮಾತನಾಡುವುದಿಲ್ಲವೆಂದು ಪಠತ್ತು ಹಾಕಿದ್ದ ಮೈಕೋ ಆಡಳಿತ ವರ್ಗ, ಕೊನೆಗೆ ಕಾಂ. ಸೂರ್ಯನಾರಾಯಣರಾವ್ ಒಂದಿಗೆ ಮಾತುಕತೆ ಮಾಡಲೇಬೇಕಾಯಿತು. ಆಡಳಿತ ವರ್ಗದೊಂದಿಗೆ ಮಾತುಕತೆ ನಡೆಸಿದ ಕಾರ್ಮಿಕ ಮುಖಂಡರು, ತಾ. 30-12-79 ರಂದು ಸಂಘದ ಸರ್ವ ಸದಸ್ಯರ ಸಭೆಯನ್ನು ಕರೆದು ಒಪ್ಪಂದದ ವಿವರಗಳನ್ನು ತಿಳಿಸಿದಾಗ ಕಾರ್ಮಿಕರು ಒಪ್ಪಂದಕ್ಕೆ ಒಪ್ಪಿಗೆ ಸೂಚಿಸಿ ಹರ್ಷೋದ್ಗಾರ ಮಾಡಿದರು. ಎಂಭತ್ತೈದು ದಿನಗಳತನಕ ನಡೆದ ಈ ದೀರ್ಘ ಹೋರಾಟ, ಕಾರ್ಮಿಕರ ಐಕ್ಯತೆ, ಬೆಂಗಳೂರಿನ ಸಮಸ್ತ ಕಾರ್ಮಿಕವರ್ಗ, ನಾಗರಿಕರು, ವಿವಿಧ ಕಾರ್ಮಿಕ ಸಂಘಗಳ ಮುಖಂಡರ ಸಹಕಾರ, ಕಾಂ. ಎನ್. ಎಲ್. ಉಪಾಧ್ಯಾಯರವರ ಸಕಾಲಿಕ ಮಧ್ಯಪ್ರವೇಶ ಹಾಗೂ ಮೈಕೋ ಕಾರ್ಮಿಕ ಸಂಘದ ಮುಖಂಡರ ಪ್ರಾಮಾಣಿಕತೆಯಿಂದ ಯಶಸ್ವಿಯಾಗಿ ಮುಕ್ತಾಯವಾಯಿತು.

ಒಪ್ಪಂದದ ವಿಶೇಷತೆಯೆಂದರೆ, ಸಸ್ಪೆಂಡ್ ಆಗಿದ್ದ ಹನ್ನೆರಡು ಜನ

[ಕಡೆಯ ಪುಟ ನೋಡಿ]

ವಿಟ್ಲ ತಾಲ್ಲೂಕು ಸಿ. ಪಿ. ಐ. ಮುಖಂಡ ಕಾಂ. ವಾಸುಗಟ್ಟಿಯವರ ಹೇಳಿಕೆ

ಮಂಗಳೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಕಾಂ. ಮಹಾಬಲೇಶ್ವರಭಟ್‌ರನ್ನು ಬೆಂಬಲಿಸಿರಿ. ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದಾಗಿನಿಂದಲೂ ಹಿರಿಯ ಬಂಡವಾಳಗಾರರ ಪರವಾದ ಕಾಂಗ್ರೆಸ್ ಪಕ್ಷ ಹಾಗೂ ಜನತಾಪಕ್ಷ, ಪ್ರಜಾಪ್ರಭುತ್ವ, ಸಮಾಜವಾದ, ಜಾತ್ಯಾತೀತತೆ ಮೊದಲಾದ ಘೋಷಣೆಗಳನ್ನು ನೀಡಿ ಜನತೆಯನ್ನು ವಂಚಿಸಿದರು. ಈ ಎರಡೂ ಪಕ್ಷಗಳು ಬಂಡವಾಳಶಾಹಿ ಸಮಾಜ ವ್ಯವಸ್ಥೆಯ ಹಾದಿಯನ್ನು ತುಳಿದುದರಿಂದ ಆರ್ಥಿಕ ಅಸಮಾನತೆ, ರಾಜಕೀಯ ಬಿಕ್ಕಟ್ಟು, ನೈತಿಕ ಅಧಃಪತನ ಮೊದಲಾದುವು ನಮ್ಮ ಸಮಾಜದಲ್ಲಿ ಜೀವಂತವಾಗಿ ಉಳಿದಿವೆ. ಈ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಗಳು ನಡೆಯುತ್ತಿವೆ. ದೇಶದ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಸರ್ವಾಧಿಕಾರವನ್ನು ಪ್ರತಿನಿಧಿಸುವ ಇಂದಿರಾ ಗಾಂಧಿ ಕಾಂಗ್ರೆಸ್ ಮತ್ತು ಜಾತೀಯವಾದಿಗಳಿಂದ ತುಂಬಿರುವ ಜನತಾಪಕ್ಷವನ್ನು ಅಧಿಕಾರಕ್ಕೆ ಬಾರದಂತೆ ತಡೆಯಲು ವಿಶಾಲವಾದ ಒಕ್ಕೂಟವೊಂದನ್ನು ಕಟ್ಟಬೇಕೆಂದು ಶ್ರಮಿಸುತ್ತಿವೆ.

ದುಡಿಯುವ ವರ್ಗದ ಪರವಾಗಿರುವ ಭಾರತ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಈ ಎರಡೂ ಪಕ್ಷಗಳು ಪರಸ್ಪರ ಸಹಕರಿಸಿ ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳನ್ನು ಹೋರಾಡುವುದು, ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಬೆಂಬಲ ನೀಡಿ ದುಡಿಯುತ್ತಿರುವುದು, ದೇಶದಲ್ಲಿ ಮೂರನೇ ಶಕ್ತಿಯೊಂದು ಮೂಡುತ್ತಿರುವುದುರ ಶುಭ ಸೂಚನೆಯಾಗಿದೆ. ಹೀಗಾಗಿ ಈ ಚುನಾವಣೆಗಳಲ್ಲಿ ಎಡ ಪಕ್ಷಗಳು ಬಲಿಷ್ಠ ಶಕ್ತಿಯಾಗಿ ಲೋಕಸಭೆಯಲ್ಲಿ ಕಾಣುವುದು ಖಂಡಿತ.

ಆದರೆ, ಕರ್ನಾಟಕದಲ್ಲಿ ಎಡ ಪಕ್ಷಗಳ ಐಕ್ಯತೆಗೆ ಸಿ. ಪಿ. ಐ. ಮುಂದಾಳುತ್ವವು ಸಹಕಾರ ನೀಡದೆ ಇರುವುದು ದುರದೃಷ್ಟಕರ. ಸಿ. ಪಿ. ಐ. (ಎಂ) ಪಕ್ಷವು ಸ್ನೇಹ ಹಸ್ತ ನೀಡಿದರೂ ತಿರಸ್ಕರಿಸಿದ ಸಿ. ಪಿ. ಐ. ಮುಂದಾಳುತ್ವವು, ಕಾಂಗ್ರೆಸ್ (ಯು) ಅಭ್ಯರ್ಥಿ ಬಿ. ಎ. ಮೊಹಿದೀನ್‌ರನ್ನು ಬೆಂಬಲಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ. ಮಹಾಬಲೇಶ್ವರ ಭಟ್‌ರ ವಿರುದ್ಧ ಬೆಂಬಲ ನೀಡುವುದು ಖಂಡನೀಯ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕ ಕಾಂ. ಎಂ. ಎಸ್. ಕೃಷ್ಣನ್ ನಾಮಪತ್ರ ಸಲ್ಲಿಸಿದಾಗಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೃಷ್ಣನ್‌ರಿಗೆ ಬೆಂಬಲ ಸಾರಿದೆ. ಮಂಗಳೂರು ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ. ಮಹಾಬಲೇಶ್ವರ ಭಟ್ಟರು ನಾಮಪತ್ರ ಸಲ್ಲಿಸಿ ಸಹಾಯ ಯಾಚನೆ ಮಾಡುತ್ತಿರುವಾಗ, ಈ ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲ ನೀಡುವುದು ಮಜೂರ ವರ್ಗದ ಪಕ್ಷವಾದ ಕಮ್ಯುನಿಸ್ಟ್ ಪಕ್ಷದ ರಾಜಕೀಯ ಧರ್ಮವಲ್ಲವೇ ?.

ಭಾರತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿಯ ತೀರ್ಮಾನದಂತೆ ಎಡ ಪಕ್ಷಗಳ ಐಕ್ಯತೆಯನ್ನು ಬೆಳೆಸುವಲ್ಲಿ ರಾಜ್ಯದ ಮುಂದಾಳುತ್ವವು ತೀರ ಹಿಂದೆ ಸರಿದಿದೆ ಹಾಗೂ ಭಂಗ ತಂದಿದೆ. ರಾಜ್ಯದ ಕಮ್ಯುನಿಸ್ಟ್ ಪಕ್ಷದ ಮುಖಂಡರ ನಿಲುಮೆ ಪಕ್ಷದ ರಾಷ್ಟ್ರೀಯ ನೀತಿಗೆ ವಿರುದ್ಧವಾಗಿದೆ. ಅಲ್ಲದೆ, ಮಂಗಳೂರು ಕ್ಷೇತ್ರದಲ್ಲಿರುವ ಕಮ್ಯುನಿಸ್ಟ್ ಪಾರ್ಟಿಯ ಸಾಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಕಡೆಗಣಿಸಿ, ಈ ಕ್ಷೇತ್ರದಲ್ಲಿ ಕಾಂಗ್ರೆಸ್ (ಯು)ಗೆ ಬೆಂಬಲಿಸುವುದು ಎಂಬ ಪತ್ರಿಕೆ ಪ್ರಕಟಣೆ ಹಾಗೂ ಮುಂದಾಳುಗಳು ಈ ಕ್ಷೇತ್ರದಲ್ಲಿ ಕಾರ್ಯಪ್ರವರ್ತರಾಗಿರುವುದನ್ನು ನೋಡುವಾಗ, ಕಾಂಗ್ರೆಸ್ (ಯು) ಮುಖಂಡರ ಆಸೆ, ಆಮಿಷಗಳಿಗೆ ಸಿ. ಪಿ. ಐ. ಮುಂದಾಳುಗಳು ಬಲಿಬಿದ್ದಂತೆ ತೋರುತ್ತದೆ.

ಆದುದರಿಂದ ವಿಟ್ಲ ವಿಧಾನಸಭಾ ಕ್ಷೇತ್ರದ ಕಮ್ಯುನಿಸ್ಟ್ ಪಾರ್ಟಿಯ ಸಾಮಾನ್ಯ ಸದಸ್ಯರ ಮತ ಹಾಗೂ ಬೆಂಬಲ ಕಾಂಗ್ರೆಸ್ (ಯು)ಗೆ ಇಲ್ಲ. ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳನ್ನು ವಿರೋಧಿಸಿ ಕಾಂ. ಎಂ. ಎಸ್. ಕೃಷ್ಣನ್ ಗೆದ್ದು ಬರಬೇಕೆಂದು ಆಸೆ ಕಟ್ಟಿಕೊಂಡಿರುವ ಭಾರತ ಕಮ್ಯುನಿಸ್ಟರಾದ ನಾವು ಮಂಗಳೂರು ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ. ಮಹಾಬಲೇಶ್ವರ ಭಟ್ಟರು ಬಹುಮತದಿಂದ ಆರಿಸಿ ಬರುವಂತೆ ಶ್ರಮಪಟ್ಟು ದುಡಿಯಲು ತೀರ್ಮಾನಿಸಿದ್ದೇವೆ.

ತಾ. 9-12-79 ರಂದು ಈ ಚುನಾವಣೆಯ ಬಗ್ಗೆ ಪಾರ್ಟಿ ಸದಸ್ಯರ ಅಭಿಪ್ರಾಯ ತಿಳಿಯಲು ಬಂಟ್ವಾಳ ತಾಲ್ಲೂಕಿನ ಕಮ್ಯುನಿಸ್ಟ್ ಪಕ್ಷದ ಮಹಾಸಭೆಯನ್ನು ಜರುಗಿಸುವಾಗ ಕೆಲವೊಂದು ಮುಂದಾಳುಗಳನ್ನು ಬಿಟ್ಟು ಸಾಮಾನ್ಯವಾಗಿ ಎಲ್ಲಾ ಸದಸ್ಯರ ಅಭಿಪ್ರಾಯ ಈ ಕ್ಷೇತ್ರದಲ್ಲಿ ಸಿ. ಪಿ. ಐ. (ಎಂ)ನ್ನು ಬೆಂಬಲಿಸಬೇಕೆಂದು ಅಭಿಪ್ರಾಯವಾಗಿದೆ. ಆದರೆ, ಈಗ ಮುಂದಾಳುಗಳ ಆದೇಶ ಭಿನ್ನವಾಗಿದೆ. ಸ್ವಾಭಿಮಾನ ಇರುವ ಕಮ್ಯುನಿಸ್ಟ್ ಪಾರ್ಟಿಯ ಯಾವ ಸದಸ್ಯನೂ ಈ ಆದೇಶವನ್ನು ಜಾರಿಗೊಳಿಸುವಂತಿಲ್ಲ. ಕಮ್ಯುನಿಸ್ಟರಾಗಿ ನಾವು ನಮ್ಮ ಮತ ಸಿ. ಪಿ. ಐ. (ಎಂ) ಅಭ್ಯರ್ಥಿ ಕಾಂ. ಮಹಾಬಲೇಶ್ವರಭಟ್‌ರವರಿಗೆ ಎಂದು ಈ ಮೂಲಕ ತಿಳಿಸಬಯಸುತ್ತೇನೆ.

ಕಾಂ. ರಾಜೇಶ್ವರರಾವ್ ಮತ್ತು ಕಾಂ. ಭೂಪೇಶ್‌ಗುಪ್ತರವರ ಹೇಳಿಕೆಗಳಂತೆ ಎಡ ಪಕ್ಷಗಳ ಐಕ್ಯತೆ ಹೆಚ್ಚಿಸಬೇಕು ಎನ್ನುವ ನಿಲುಮೆಗೆ ನಾವು ಬದ್ಧರು.

ಸಿ. ಪಿ. ಐ. ದಕ್ಷಿಣ ಕನ್ನಡ ಜಿಲ್ಲಾ ಮುಂದಾಳುಗಳು ಕಳೆದ ಎರಡು ವರ್ಷಗಳಿಂದ ಪಕ್ಷದ ರಾಷ್ಟ್ರೀಯ ನೀತಿಗೆ ವ್ಯತಿರಿಕ್ತವಾಗಿ ವರ್ತಿಸುತ್ತಾ ಬಂದಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯುಲ್ಲಿ ಕಾಂಗ್ರೆಸ್ಸಿನೊಂದಿಗೆ ಸ್ಥಾನದ ಹೊಂದಾಣಿಕೆಗೆ ಎಂಬ ನಂಬಿಕೆಯನ್ನು ಪಾರ್ಟಿ ಸದಸ್ಯರಲ್ಲಿ ಹುಟ್ಟಿಸಿ ಕಾಂಗ್ರೆಸ್ಸಿನೊಂದಿಗೆ ಮೈತ್ರಿ ಬೆಳೆಸಿದರು. ಚುನಾವಣಾ ಪ್ರಚಾರ ಸಭೆಗಳು ಕಾಂಗ್ರೆಸ್ (ಐ). ಕಮ್ಯುನಿಸ್ಟ್ ಮುಖಂಡರ ಜಂಟಿ ಭಾಷಣಗಳು ಎಲ್ಲೆಲ್ಲೂ ಹಾರಿಸಲಾಯಿತು. ಅಲ್ಲದೆ ಇಂದಿರಾಗಾಂಧಿಯವರ ಭಾವಚಿತ್ರವಿರುವ ಪೋಸ್ಟರುಗಳನ್ನು ಅಚ್ಚುಮಾಡಿ ಅಂಟಿಸಲಾಯಿತು. ಅದೇ ರೀತಿ ಕಾಂಗ್ರೆಸ್ (ಐ)ನೊಂದಿಗೆ ಸ್ಥಾನದ ಹೊಂದಾಣಿಕೆ ನಡೆಸಿ ಮೈತ್ರಿ ಬೆಳೆಸಿತು.

ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ ರಾಷ್ಟ್ರೀಯ ನೀತಿ ಇರುವಾಗ ಜಿಲ್ಲೆಯ ಮುಂದಾಳುಗಳು ತೀರಾ ವಿಭಿನ್ನ ನಿಲುಮೆವಹಿಸಿ ಪಾರ್ಟಿ ಸದಸ್ಯರ ತಲೆಯ ಮೇಲೆ ಹೊರಿಸಲಾರದ ಭಾರವನ್ನು ಹೊರಿಸುವುದು ತೀರಾ ಖಂಡನೀಯ. ಸ್ವಾಭಿಮಾನವಿರುವ ಯಾವ ಸದಸ್ಯನೇ ಆದರೂ ಈ ಮುಂದಾಳುಗಳ ತಪ್ಪು ಹಾದಿಯನ್ನು ತುಳಿಯಲು ಸಿದ್ಧರಿಲ್ಲ.

ಆದುದರಿಂದ ಮಂಗಳೂರು ಲೋಕಸಭಾ ಕ್ಷೇತ್ರದ ಮತದಾರ ಬಂಧುಗಳಲ್ಲಿ ವಿನಂತಿಸುವುದೇನೆಂದರೆ, ದುಡಿಯುವ ಜನರ ದಿನನಿತ್ಯದ ಜೀವಂತ ಸಮಸ್ಯೆಗಳನ್ನು ಅರಿತು ಅವರ ಚಳುವಳಿಗೆ ಹೋರಾಟಗಳನ್ನು ಲೋಕಸಭೆಯಲ್ಲಿ ಪ್ರತಿಬಿಂಬಿಸುವಂತಾಗಲು, ಈ ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿರುವ ಕಾಮ್ರೇಡ್ ಮಹಾಬಲೇಶ್ವರ ಭಟ್‌ರಿಗೆ ನಿಮ್ಮ ಬೆಲೆಯುಳ್ಳ ಮತಗಳನ್ನು ನೀಡಿ ಬಹುಮತದಿಂದ ಆರಿಸಿರಿ ಎಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಕತ್ತಿ, ಸುತ್ತಿಗೆ, ನಕ್ಷತ್ರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಚಿಹ್ನೆ.

ಇಂತಿ
ಬಿ. ವಾಸುಗಟ್ಟಿ (ಸಹಿ)
ಮೆಂಬರ್, ಬಂಟ್ವಾಳ ತಾಲ್ಲೂಕು ಕಮಿಟಿ
ಭಾರತ ಕಮ್ಯುನಿಸ್ಟ್ ಪಾರ್ಟಿ
(ಸಿ. ಪಿ. ಐ.)

●

ವಿವಿಧ ಕಾರ್ಮಿಕ ಸಂಘಟನೆಗಳಿಂದ ಸಾಮೂಹಿಕ ಧರಣಿ ಸತ್ಯಾಗ್ರಹ

ಮೈಸೂರಿನಲ್ಲಿ ಇತ್ತೀಚೆಗೆ ಸುಮಾರು 20ಂದ 3 ತಿಂಗಳ ಕಾಲ ನಡೆದ ದಾಸ್‌ಪ್ರಕಾಶ್ ಹೋಟೆಲ್ ಕೆಲಸಗಾರರ ಮತ್ತು ಶಿವಮೊಗ್ಗ ಸ್ಟೀಲ್ಸ್ ಕೆಲಸಗಾರರ ಹೋರಾಟದ ಸಮಯದಲ್ಲಿ ಕೆಲಸಗಾರರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸುವುದಕ್ಕಾಗಿ ಸರ್ಕಾರ ಮಧ್ಯೆ ಪ್ರವೇಶಿಸಿ, ಕಾರ್ಮಿಕರಿಗೆ ನ್ಯಾಯ ದೊರಕಿಸಿ ಕೊಡುವುದರ ಬದಲು ಮುಷ್ಕರಗಳನ್ನು ನಿಶೇಧಿಸಿ ತನ್ನ ಕಾರ್ಮಿಕ ವಿರೋಧಿ ನೀತಿಯನ್ನು ಪ್ರದರ್ಶಿಸಿದ್ದನ್ನು ಖಂಡಿಸುವುದಕ್ಕೆ ಮತ್ತು ಈ ಸಮಯದಲ್ಲಿ ಕಾರ್ಮಿಕ ಇಲಾಖಾ ಅಧಿಕಾರಿಗಳು ಮಾಲೀಕರಿಗೆ ಸಲಹೆಗಾರರಾಗಿದ್ದನ್ನು ಪ್ರತಿಭಟಿಸುವುದಕ್ಕೆ ತಾ. 13-12-79ರಂದು ಸಿ. ಐ. ಟಿ.ಯು. ಹಾಗೂ ಎ.ಐ.ಟಿ.ಯು.ಸಿ. ಪ್ರತಿನಿಧಿಗಳು ಸಭೆ ಸೇರಿ ಕೆಲವು ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಮತ್ತು ಎ. ಐ. ಟಿ. ಯು. ಸಿ. ಮತ್ತು ಸಿ. ಐ. ಟಿ. ಯು. ನ ಸಂಘಟನೆಗಳು ಅಲ್ಲದೆ, ಇತರೆ ಸಂಘಟನೆಗಳನ್ನು ಸೇರಿದಂತೆ, ಕಾರ್ಮಿಕರ ಹಿತದೃಷ್ಟಿಯಿಂದ ವಿಶಾಲ ತಳಹದಿಯ ಮೇಲೆ ಒಂದು ಸಂಘಟನಾ ಸಮಿತಿಯನ್ನು ರಚಿಸಬೇಕೆಂದು, ಅದಕ್ಕೆ ಎ. ಐ. ಟಿ. ಯು.ಸಿ. ಯಿಂದ ಕಾಂ. ಸೋಮಸುಂದರ ಶರ್ಮ ಮತ್ತು ಕಾಂ. ಕೆ. ವೆಂಕಟರಾಮಯ್ಯ ಹಾಗೂ ಸಿ ಐ.ಟಿ.ಯು ವಿನಿಂದ ಕಾಂ. ಎಂ.ಎಸ್. ಉಗ್ರಪ್ಪ ಮತ್ತು ಕಾಂ. ಎಂ. ಶೇಖರ್‌ರವರು ಇತರ ಕಾರ್ಮಿಕ ಸಂಘಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರುಗಳು ಸಹ ಈ ಸಮಿತಿಯಲ್ಲಿ ಹಾಜರಾಗುವಂತೆ ಮಾಡಲು ಅಧಿಕಾರ ನೀಡಲಾಯಿತು. ಈ ಕಾರ್ಯಕ್ರಮದ ಮೊದಲನೆ ಅಂಗವಾಗಿ ತಾ. 20-12-79ರಂದು ಕಾರ್ಮಿಕ ಇಲಾಖಾ ಕಛೇರಿಯ ಮುಂದೆ ಧರಣಿ ನಡೆಸಲಾಯಿತು.

ತಾ. 20-12-79ರಂದು ಮೈಸೂರಿನಲ್ಲಿರುವ ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ. ಸಂಘಟನೆಗಳು ಕೊಟ್ಟಿದ್ದ ಜಂಟಿ ಕರೆಯ ಮೇರೆಗೆ ವಿವಿಧ ಕಾರ್ಮಿಕ ಸಂಘಗಳಿಗೆ ಸೇರಿದ ಸುಮಾರು 300ಕ್ಕೂ ಹೆಚ್ಚು ಕಾರ್ಮಿಕ ಪ್ರತಿನಿಧಿಗಳು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಗಳನ್ನು ನಡೆಸಿ ಬೆಳಿಗ್ಗೆ 11 ಘಂಟೆಯಿಂದ ಸಂಜೆ 5ಘಂಟೆಯುವರೆಗೆ ಸಹಾಯಕ ಕಾರ್ಮಿಕ ಕಮೀಷನರ್ ಕಛೇರಿಯ ಮುಂದೆ ಧರಣಿ ನಡೆಸಿದರು. ಎಲ್ಲಾ ಕಾರ್ಮಿಕ ಸಂಘಗಳು ಅವರವರ ಬ್ಯಾನರ್ ಮತ್ತು ಬಾವುಟಗಳ ಅಡಿಯಲ್ಲಿ ಪ್ರದರ್ಶನದಲ್ಲಿ ಭಾಗವಹಿಸಿದ್ದರು ಮತ್ತು ಕಛೇರಿಯ ಮುಂದೆ ಘೋಷಣೆಗಳನ್ನು ಕೂಗುವುದರ ಮೂಲಕ ಕಾರ್ಮಿಕ ಇಲಾಖೆಯಲ್ಲಿ ತುಂಬಿತುಳುಕುತ್ತಿರುವ ಭ್ರಷ್ಟಾಚಾರ, ಲಂಚಗುಳಿತನ, ಮತ್ತು ಸಂಧಾನದ ಸಮಯದಲ್ಲಿ ಅಧಿಕಾರಿಗಳು ಮಾಲೀಕರ ಪರವಾಗಿ ವಾದಿಸುವುದನ್ನು ಕೈಬಿಡಬೇಕೆಂದು ಒತ್ತಾಯಿಸಲಾಯಿತು. ಮತ್ತು ಮಾಲೀಕರಿಗೆ ಸಲಹೆ ನೀಡುವುದನ್ನು ಸಹ ಅಧಿಕಾರಿಗಳು ನಿಲ್ಲಿಸಬೇಕೆಂದು, ಕಾರ್ಮಿಕ ಕಾಯ್ದೆಗಳನ್ನು ಉಲ್ಲಂಘಿಸುವ ಮಾಲೀಕರ ಮೇಲೆ ಕಾನೂನುಕ್ರಮ ಕೈಗೊಳ್ಳಬೇಕೆಂದು ಮನವಿ ಪತ್ರವನ್ನು ಸಹಾಯಕ ಕಾರ್ಮಿಕ ಕಮೀಷನರ್, ಕಮೀಷನರ್ ಫಾರ್ ಲೇಬರ್, ಕರ್ನಾಟಕ ಬೆಂಗಳೂರು ಮತ್ತು ಚೀಫ್ ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್, ಕರ್ನಾಟಕ ರವರುಗಳಿಗೆ ಕೊಡಲಾಯಿತು. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಕೆಲವು ವಿಷಯಗಳ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿಯೂ ಮತ್ತು ಉಳಿದ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಾಗಿಯೂ ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರು ಆಶ್ವಾಸನೆಯಿತ್ತರು. ನಂತರ 5 ಗಂಟೆಗೆ ಕಾರ್ಮಿಕರನ್ನುದ್ದೇಶಿಸಿ, ಎ.ಐ.ಟಿ.ಯು.ಸಿ ಯ ಪರವಾಗಿ ಕಾಂ. ಸೋಮಸುಂದರ್ ಶರ್ಮ ಮತ್ತು ಸಿ ಐ.ಟಿ.ಯು. ಪರವಾಗಿ ಕಾಂ. ಎಂ. ಶೇಖರ್‌ರವರು ಮಾತನಾಡಿದರು. ನಂತರ ಸಭೆಯು ಕೊನೆಗೊಂಡಿತು. ಪ್ರದರ್ಶನದಲ್ಲಿ ವಿಮಾ ನೌಕರರ ಪ್ರತಿನಿಧಿಗಳು ಸಹ ಭಾಗವಹಿಸಿದ್ದರು.

ಅಸ್ಸಾಮಿನ ಗಲಭೆಗಳಲ್ಲಿ ಸಿ. ಐ. ಎ. ಕೈವಾಡ?

ಆರ್. ಚಂದ್ರ

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಗುಪ್ತಾಚಾರ ಸಂಸ್ಥೆಯಾದ ಸಿ.ಐ.ಎ ಇತರ ಮೂರನೇ ಜಗತ್ತಿನ ದೇಶಗಳಲ್ಲಿನಂತೆಯೇ ಭಾರತದಲ್ಲಿಯೂ ತನ್ನ ಜಾಲವನ್ನು ವಿಸ್ತರಿಸುತ್ತಾ ಪ್ರಜಾಪ್ರಭುತ್ವವಾದಿ ಶಕ್ತಿಗಳ ವಿರುದ್ಧ ಪಿತೂರಿ ನಡೆಸುತ್ತಿದೆ; ಆಂತರಿಕ ಅಸ್ಥಿರತೆ, ಗಲಭೆ ಗೊಂದಲಗಳನ್ನು ಪ್ರಚೋದಿಸುತ್ತಿದೆ; ಭಾರತದ ಒಕ್ಕೂಟವನ್ನು ಒಡೆಯಲು ಸಂಚು ಹೂಡುತ್ತಿದೆ. ರಾಜಕೀಯ ಹಾಗೂ ಆರ್ಥಿಕ ಧೋರಣೆಗಳನ್ನು ಅಮೇರಿಕದ ಹಿತಾಸಕ್ತಿಗಳಿಗನುಗುಣವಾಗಿ ರೂಪಿಸಲು ತನ್ನ ವರ್ಚಸ್ಸನ್ನು ಬೀರುತ್ತಿದೆ.

ಸಿ.ಐ.ಎ.ಯ ಹಿನ್ನೆಲೆ :

1960ರ ದಶಕದ ಪ್ರಾರಂಭದಲ್ಲಿಯೇ ಭಾರತ-ಚೀನಾ ಗಡಿ ಘರ್ಷಣೆಯ ಅವಧಿಯಲ್ಲಿ ಭಾರತ ಸರಕಾರದ ಮನ ಒಲಿಸಿ ಸಿ. ಐ. ಎ. ತನ್ನ ಅಣು ವಿಕರಣ ಸಜ್ಜಿತ ಗೂಢಚರ್ಯೆಯ ಉಪಕರಣವೊಂದನ್ನು ಚೀನಾದ ವಿರುದ್ಧ ಹಿಮಾಲಯದ ನಂದಾದೇವಿ ಶಿಖರದಲ್ಲಿರಿಸಿತ್ತು. 1970ರಲ್ಲಿ ನಡೆದ ಭಾರತ-ಪಾಕಿಸ್ಥಾನ ಯುದ್ಧ ಮತ್ತು ಬಂಗ್ಲಾದೇಶ ವಿಮೋಚನಾ ಸಮರದ ಕುರಿತು ಭಾರತ ಸರಕಾರದ ಮಿಲಿಟರಿ ಹಾಗೂ ರಾಜಕೀಯ ರಹಸ್ಯಗಳನ್ನು ಸತತವಾಗಿ ಅಮೇರಿಕಕ್ಕೆ ತಿಳಿಸುವ ಸಿ.ಐ.ಎ. ಏಜೆಂಟ್ ಒಬ್ಬರು ಇಂದಿರಾಗಾಂಧಿಯವರ ಮಂತ್ರಿಮಂಡಲದಲ್ಲಿಯೇ ಇದ್ದರೆಂದು ಇದೀಗ ತಿಳಿದು ಬಂದಿದೆ! 1959ರಲ್ಲಿ ಕೇರಳದ ಕಮ್ಯುನಿಸ್ಟ್ ಸರಕಾರವನ್ನುರುಳಿಸಲು ಮತ್ತು 1967ರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟರ ನೇತೃತ್ವದಲ್ಲಿನ ಸಂಯುಕ್ತರಂಗವನ್ನು ಪ.ಬಂಗಾಳದಲ್ಲಿ ಸೋಲಿಸಲು ಇಂದಿರಾಗಾಂಧಿಗೆ ಸಿ.ಐ.ಎ. ಎರಡು ಸಲ ಹೇರಳ ಹಣ ಸಹಾಯ ನೀಡಿರುವುದಾಗಿ ಅಮೇರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಕಿಸಿಂಜರ್‌ರವರೇ ತಿಳಿಸಿರುತ್ತಾರೆ. ಭಾರತದ ಗುಪ್ತಚಾರ ಪಡೆಗಳಿಗೂ ಸಿ.ಐ.ಎ. ತಂತ್ರಜ್ಞರಿಂದ ತರಬೇತಿ ನೀಡಲಾಗುತ್ತಿದೆ ಎಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. 1977ರ ಲೋಕಸಭಾ ಚುನಾವಣೆಯ ಪೂರ್ವದಲ್ಲಿ ದೇಶದ ಎಡಪಕ್ಷಗಳ ರಾಜಕೀಯ ಹಾಗೂ ಕಾರ್ಮಿಕರ ಧುರೀಣರನೇಕರನ್ನು ಕೊಲೆಗೈಯಬೇಕೆಂದೂ ಸಿ.ಐ.ಎ. ಒಳಸಂಚು ನಡೆಸಿತ್ತಂತೆ.

ಅಸ್ಥಿರತೆಯ ಈಶಾನ್ಯ ಭಾರತದಲ್ಲಿ ಸಿ.ಐ.ಎ. :

ಈ ಹಿನ್ನೆಲೆಯಲ್ಲಿ ಭಾರತದ ಈಶಾನ್ಯ ಪ್ರಾಂತ್ಯಗಳಾದ ಅಸ್ಸಾಂ, ಅರುಣಾಚಲ, ಮೇಘಾಲಯ, ತ್ರಿಪುರಾ, ಮಣಿಪುರ, ಮಿಝೋರಾಂ, ನಾಗಾಲ್ಯಾಂಡ್‌ಗಳಲ್ಲಿನ ಜನರಲ್ಲಿರುವ ಭಾಷೆಯ, ಜನಾಂಗದ, ರಾಷ್ಟ್ರೀಯತೆಯ, ಜಾತಿಧರ್ಮಗಳ ಕುರಿತಾದ ಭಿನ್ನಾಭಿಪ್ರಾಯಗಳನ್ನೂ, ವೈಷಮ್ಯಗಳನ್ನೂ ದುರುಪಯೋಗಪಡಿಸಿಕೊಂಡು ಅಲ್ಲಿನ ಜನರನ್ನು ಭಾರತದ ಒಕ್ಕೂಟದಿಂದ ಸಿಡಿದು ಹೊರಬರುವಂತೆ ಪ್ರಚೋದಿಸಲಿಕ್ಕೂ, ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಪ್ರದೇಶಗಳ ಜನರಲ್ಲಿ ಬೆಳೆಯುತ್ತಿರುವುದನ್ನು ತಡೆಗಟ್ಟಲಿಕ್ಕೂ ಸಿ.ಐ.ಎ. ಸಕ್ರಿಯವಾಗಿ ಪಿತೂರಿ ನಡೆಸುತ್ತಿದೆ ಎಂದು "ಪೀಪಲ್ಸ್ ಡೆಮೊಕ್ರಸಿ", "ಇಕನಾಮಿಕ್ಸ್ ಮತ್ತು ಪೊಲಿಟಿಕಲ್ ವೀಕ್ಲಿ", "ಇಂಡಿಯನ್ ಎಕ್ಸ್‌ಪ್ರೆಸ್" ಮುಂತಾದ ಪತ್ರಿಕೆಗಳಲ್ಲಿ ಇತ್ತೀಚೆಗೆ ಸ್ಪಷ್ಟವಾಗಿಯೂ ಸೂಚ್ಯವಾಗಿಯೂ ವರದಿಗಳಾಗಿವೆ.

ಈಶಾನ್ಯದ ರಾಜ್ಯಗಳಲ್ಲಿ 30 ವರ್ಷಗಳ ಕಾಂಗ್ರೆಸ್ ಆಳ್ವಿಕೆಯಿಂದಾಗಿ ರಾಜಕೀಯ ಅಸ್ಥಿರತೆಯಿಂದ ಆಗಾಗ ಕೇಂದ್ರಾಡಳಿತದಿಂದಾಗಿ, ಕೇಂದ್ರದ ಅಲಕ್ಷದಿಂದಾಗಿ ರಾಜ್ಯಗಳ ಸ್ವಾಯತ್ತತೆಯನ್ನು ಗೌರವಿಸದೆ ಕೇಂದ್ರದಲ್ಲಿಯೇ ಅಧಿಕಾರ ಮತ್ತು ಸಂಪನ್ಮೂಲಗಳ ಕೇಂದ್ರೀಕರಣದಿಂದಾಗಿ ಇಲ್ಲಿನ ಗುಡ್ಡಗಾಡು ಜನಾಂಗಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳನ್ನು ಬಗೆಹರಿಸಲು ವಿಫಲವಾಗಿ ಜನರ ಅತೃಪ್ತಿ ಅಸಂತೋಷಗಳು ಭುಗಿಲೆದ್ದವು. 1977ರ ನಂತರ ನಡೆದ ಚುನಾವಣೆಗಳಲ್ಲಿ ಈ ಎಲ್ಲಾ ರಾಜ್ಯಗಳಲ್ಲಿಯೂ ಕಾಂಗ್ರೆಸ್ ಸೋತಿತು. ಕೆಲವೆಡೆಗಳಲ್ಲಿ ಅಧಿಕಾರಕ್ಕೆ ಬಂದ ಜನತಾ ಸರಕಾರವೂ ಈ ಜನರ ಆಶೋತ್ತರಗಳನ್ನು ಈಡೇರಿಸಲಾಗದೆ ಸೋತಿತು. ಇಲ್ಲಿನ ಜನರ ಸಮಸ್ಯೆಗಳಿಗೆ ಭಾರತದ ಒಕ್ಕೂಟದ ಚೌಕಟ್ಟಿನಲ್ಲಿಯೇ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿನಂತೆ ಬದಲು ಮಾರ್ಗವನ್ನು ಜನಪ್ರಿಯಗೊಳಿಸುತ್ತಿರುವಷ್ಟರಲ್ಲಿಯೇ ಸಿ. ಐ. ಎ. ತನ್ನ ಪಿತೂರಿಯಿಂದ ಪ್ರಾದೇಶಿಕ ಹಿತಾಸಕ್ತಿಗಳನ್ನು ಎತ್ತಿಕಟ್ಟಿ ಭಾರತದ ಒಕ್ಕೂಟದಿಂದಲೇ ಪ್ರತ್ಯೇಕಗೊಳ್ಳುವಂತೆ ಜನರನ್ನು ಪ್ರಚೋದಿಸಲಾರಂಭಿಸಿತು.

ಬ್ರಹ್ಮಪುತ್ರಾ ಯೋಜನೆ :

ಇತ್ತೀಚೆಗೆ ವಿದೇಶಿ ರಾಯಭಾರಿ ಕಛೇರಿಗಳಲ್ಲಿರುವ ಭಾರತೀಯ ನೌಕರರು, ಅಧಿಕಾರಿಗಳು ಅಸ್ಸಾಂ, ಮೇಘಾಲಯ ಮುಂತಾದ ಗೊಂದಲಕ್ಕೀಡಾಗಿರುವ ಪ್ರದೇಶಗಳಿಗೆ ಹೆಚ್ಚಾಗಿ ಹೋಗಿ ಬರುತ್ತಿರುವುದು, ಕಲ್ಕತ್ತಾದಿಂದ ಅವರ ಟೆಲಿಫೋನ್ ವ್ಯವಹಾರಗಳು ಹೆಚ್ಚುತ್ತಿರುವುದು ರಾಜ್ಯಗಳ ಮತ್ತು ಕೇಂದ್ರದ ಗುಪ್ತಾಚಾರ ಇಲಾಖೆಗಳಿಗೆ ತಲೆನೋವು ಉಂಟಾಗಿದೆ ಎಂದು "ಇಂಡಿಯನ್ ಎಕ್ಸ್‌ಪ್ರೆಸ್" ತಾ. 18-12-79 ರಂದು ವರದಿ ಮಾಡಿದ್ದು ಈ ಪ್ರದೇಶಗಳ ಗಲಭೆಗಳಲ್ಲಿ ವಿದೇಶಿಯರ ಹಸ್ತಕ್ಷೇಪವಿದೆಯೆಂದು ಸಂಶಯ ತಾಳಿದೆ. 'ವಿದೇಶಿ'ಯರನ್ನು ಮತ್ತು 'ಹೊರಗಿನ'ವರನ್ನು ಮುಂಬರುವ ಲೋಕಸಭಾ ಚುನಾವಣೆಯ ಮುನ್ನ ಮತದಾರರ ಪಟ್ಟಿಯಿಂದ ತೆಗೆದು ಹಾಕಬೇಕು. ಅವರನ್ನು ಗಡೀಪಾರು ಮಾಡಬೇಕು. ಚುನಾವಣೆಯನ್ನು ಮುಂದಕ್ಕೆ ಹಾಕಬೇಕು, ಎಂಬಿತ್ಯಾದಿ ಘೋಷಣೆಗಳಿಂದ ಅಸ್ಸಾಮಿನಲ್ಲಿ ಬಹು ದಿನಗಳಿಂದ ನಡೆಯುತ್ತಿರುವ ಹಿಂಸಾತ್ಮಕ ಚಳುವಳಿಯಲ್ಲಿ ಸಿ. ಐ. ಎ. ಯ ಕೈವಾಡವಿದೆ. ಅಮೇರಿಕಾದ ವಾರ್ತಾ ಸೇವಾ ಇಲಾಖೆಯಿಂದ ತಾ.12-6-79 ರಂದು 'ಬ್ರಹ್ಮಪುತ್ರಾ ಯೋಜನೆ' ಎಂಬ ಶಿರೋನಾಮೆಯಲ್ಲಿ ಹೊರಡಿಸಿದ ಒಂದು ಸುತ್ತೋಲೆಯಿಂದ ಇದು ಸ್ಪಷ್ಟವಾಗಿದೆ. 'ಪೀಪಲ್ಸ್ ಡೆಮೊಕ್ರಸಿ' ತಾ. 9-12-79 ರಂದು ಉದ್ಧರಿಸಿದ ಈ ಸುತ್ತೋಲೆಯ ಕೆಲವು ಮುಖ್ಯ ಭಾಗಗಳನ್ನು ಈ ಕೆಳಗೆ ಕೊಡಲಾಗಿದೆ.

"...ಅಮೇರಿಕದ ವಿದೇಶಾಂಗ ಖಾತೆಯ ಸಮ್ಮತಿಯಂತೆ, ಜಾರ್ಜ್ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ವಿಶೇಷ ಅಧ್ಯಯನ ಕಛೇರಿಯು (SORC) ಸಿಕ್ಕಿಂ, ಭೂತಾನ ಕೂಡಿ ಈಶಾನ್ಯ ಭಾರತದಲ್ಲಿ ಸಾಮಾಜಿಕ ಅಧ್ಯಯನ ಕೈಗೊಳ್ಳಲು ಭಾರತದಲ್ಲಿನ ಅಮೇರಿಕದ ಕಛೇರಿಯ (ಅಂದರೆ ಸಿ. ಐ.ಎ) ಸಹಾಯವನ್ನು ಕೇಳಿಕೊಂಡಿದೆ. ...ಈ ಪ್ರದೇಶಗಳಲ್ಲಿ ಈಗಿರುವ ರಾಜ್ಯ ವ್ಯವಸ್ಥೆ ಜನರಿಗೆ ಎಷ್ಟರಮಟ್ಟಿಗೆ ಸ್ವೀಕಾರಾರ್ಹವಾಗಿದೆ ಮತ್ತು ಅವರಿಗೆ ತಾವು ಪ್ರತ್ಯೇಕ ರಾಜ್ಯ ಸ್ಥಾಪಿಸಿಕೊಳ್ಳಬೇಕೆಂಬ ಅಭಿಲಾಷೆ ಏನಾದರೂ ಅವರ ಸಧ್ಯದ ಸಮಸ್ಯೆಯಾಗಿರುವಂತಹ ಕುರುಹುಗಳಿವೆಯೋ ಎಂಬುದನ್ನು ಅನ್ವೇಷಣೆಮಾಡಿ ಜನಾಭಿಪ್ರಾಯದ ಮೇಲೆ ಬೆಳಕು ಚೆಲ್ಲುವುದೇ ಇದರ ಉದ್ದೇಶ ... ನಮ್ಮ ಸಂಸ್ಥೆಯು ಈ ರೀತಿಯ ಅಧ್ಯಯನವನ್ನು (ಅಂದರೆ ಪಿತೂರಿ) ಹಲವಾರು ದೇಶಗಳಲ್ಲಿ ಕೈಗೊಂಡಿದೆ. ಇದರಿಂದ ಅಲ್ಲಿನ ರಾಜಕೀಯ ಪರಿಸ್ಥಿತಿಗಳನ್ನು ನಮಗೆ ಸರಿಯಾಗಿ ಅರ್ಥ ಮಾಡಿಕೊಳ್ಳಲು, ಅಮೇರಿಕದ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಅತ್ಯುತ್ತಮ ವಿಧಾನಗಳನ್ನು ಆರಿಸಿಕೊಳ್ಳಲೂ ತೃಪ್ತಿಕರವಾದ ಪ್ರತಿಫಲಗಳು ದೊರಕಿವೆ. ...ಹಿಂದಿನ ಅನುಭವಗಳಿಂದ ಹೇಳುವುದಾದರೆ, ಭಾರತದಲ್ಲಿ ಅಂತಹ ಅಧ್ಯಯನಗಳನ್ನು ಅತಿ ಜಾಗ್ರತೆಯಿಂದ ಮಾಡಬೇಕು. ಚುನಾವಣೆಯ ಸಮಯದಲ್ಲಿ ದೇಶದ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡಿದೆವು ಎಂದು ನಾವು ಅಪಾದನೆಗೀಡಾಗಬಾರದು. ...ನಮ್ಮ ಗುಟ್ಟು ರಟ್ಟಾಯಿತೆಂದು ಸ್ಥಳೀಯ ಜನರು ಅಭಿಪ್ರಾಯ ಪಡುವಂತೆ ನಾವು ಹಿಂದೆ ಬೇರೆ ದೇಶಗಳಲ್ಲಿ ಕೆಲವೊಮ್ಮೆ ವರ್ತಿಸಿದ್ದುಂಟು...".

ಸುತ್ತೋಲೆಯಲ್ಲಿ ಎಲ್ಲವೂ ಸ್ಪಷ್ಟವಾಗಿದೆ. ಮುಚ್ಚುಮರೆಯಿಲ್ಲ. ಪ. ಬಂಗಾಳ ಅಸ್ಸಾಂ, ತ್ರಿಪುರಾ ಮುಂತಾದ ಈಶಾನ್ಯ ಭಾರತದ ರಾಜ್ಯಗಳಲ್ಲಿ ಸ್ವತಂತ್ರ ರಾಜ್ಯ ಸ್ಥಾಪನೆಯನ್ನು ಜನರಲ್ಲಿ ಪ್ರಚೋದಿಸುವುದು, ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡುವುದು, ತಮ್ಮ ಸಂಚು ಬಹಿರಂಗಗೊಳ್ಳದಂತೆ ಮತ್ತು ತಾವು ಸಿಕ್ಕಿಬೀಳದಂತೆ ಎಚ್ಚರವಹಿಸುವುದು, ಎಲ್ಲವೂ ಸ್ಪಷ್ಟವಾಗಿದೆ. ಕುರುಡರು ಅಥವಾ ದ್ರೋಹಿಗಳು ಮಾತ್ರ ಸುತ್ತೋಲೆಗೂ ಇಂದು ಅಸ್ಸಾಮಿನಲ್ಲಿ ನಡೆಯುತ್ತಿರುವ ಗಲಭೆಗಳಿಗೂ ಸಂಬಂಧ ಕಲ್ಪಿಸದೇ ಇರಬಹುದು. ಕಳೆದ ಸ್ವಾತಂತ್ರ್ಯೋತ್ಸವದ ವೇಳೆ ಅಸ್ಸಾಮಿನ ರಾಜಧಾನಿಯಾದ ಗೌಹತಿಯಲ್ಲಿ 'ಭಾರತೀಯರೇ ತೊಲಗಿರಿ' ಎಂಬ ಭಿತ್ತಿಪತ್ರಗಳೂ ಬೆಳಕಿಗೆ ಬಂದಿರುವುದನ್ನು ಇಲ್ಲಿ ಸ್ಮರಿಸಬಹುದು.

ಸ್ವತಂತ್ರ ಕ್ರಿಶ್ಚಿಯನ್ ರಾಜ್ಯ :

ಈಶಾನ್ಯ ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಸ್ವಾತಂತ್ರ್ಯಾನಂತರ ನೆರೆಯ ಪೂ. ಪಾಕಿಸ್ಥಾನದಿಂದ (ನಂತರ ಬಂಗ್ಲಾದೇಶದಿಂದ) ಬಹುಸಂಖ್ಯೆಯಲ್ಲಿ ವಲಸೆ ಬರುತ್ತಿರುವುದರಿಂದ ಮತ್ತು ಭಾರತದ ಇತರ ರಾಜ್ಯಗಳಿಂದ ವ್ಯಾಪಾರ, ಉದ್ಯೋಗಿಗಳಾಗಿ ಗಣನೀಯ ಪ್ರಮಾಣದಲ್ಲಿ ಬಂದು ನೆಲೆಸುತ್ತಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ಮುಖ್ಯವಾಗಿ ಗುಡ್ಡಗಾಡು ಜನರಿಗೆ ತಾವು ತಮ್ಮ ನಾಡಿನಲ್ಲಿಯೇ ಅಲ್ಪಸಂಖ್ಯಾತರಾಗುತ್ತಿದ್ದೇವೆಂಬ ಸ್ವಾಭಾವಿಕ ಭಯ ಬೆಳೆದು ಬಂದಿದೆ. ಈ ಪ್ರದೇಶಗಳ ಜನರ ಭಾಷೆ, ಸಂಸ್ಕೃತಿ, ಜನಾಂಗ, ಜಾತಿಧರ್ಮಗಳು ನೆರೆಯ ದೇಶದಿಂದ ವಲಸೆ ಬಂದ ಮತ್ತು ನೆರೆಯ ರಾಜ್ಯಗಳಿಂದ ನೆಲೆಸಲು ಬಂದ ಜನರಿಂದ ಭಿನ್ನವಾಗಿದ್ದು, ತಾವು ಏನನ್ನೋ ಕಳೆದುಕೊಳ್ಳುತ್ತಿದ್ದೇವೆ, ತಮಗೆ ಭದ್ರತೆ ಇಲ್ಲ ಎಂದೂ ಭಾವಿಸತೊಡಗಿದ್ದಾರೆ.

ಇಲ್ಲಿ ಕ್ರಿಶ್ಚಿಯನ್ ಮಿಶನರಿಗಳು ತುಂಬಾ ಪ್ರಭಾವಿತರಾಗಿದ್ದು, ಇತ್ತೀಚೆಗೆ ಆರ್. ಎಸ್. ಎಸ್.-ಜನಸಂಘದವರು ಹಿಂದೂ ರಾಷ್ಟ್ರ ಸ್ಥಾಪನೆಯ ಕೋಮುವಾದಿ ಕಲ್ಪನೆಯನ್ನು ಈ ಮುಗ್ಧ ಜನರ ಮೇಲೆ ಹೇರುತ್ತಿದ್ದಾರೆ. ಇದರಿಂದಾಗಿ ಸ್ಥಳೀಯ ಗುಡ್ಡಗಾಡು ಜನರು ಕಂಗಾಲಾಗುವುದರೊಂದಿಗೆ, ಈ ರಾಜ್ಯಗಳಲ್ಲಿ ವಲಸೆ ಬಂದಿರುವ ಮುಸ್ಲಿಂ ಅಲ್ಪ ಸಂಖ್ಯಾತರೂ ಹೆದರುವಂತಾಗಿದೆ. ಕ್ರಿಶ್ಚಿಯನ್ ಮಿಶನರಿಗಳ ಪ್ರಭಾವವನ್ನು ಕುಗ್ಗಿಸಲು ಜನಸಂಘ ಸದಸ್ಯ ತ್ಯಾಗಿಯವರ ಮತಾಂತರದ ಕುರಿತಾದ ಮಸೂದೆಯನ್ನು ಆಗಿನ ಜನತಾ ಸರಕಾರ ಬೆಂಬಲಿಸಿದುದರಿಂದ ಹಿಂದೂ ರಾಷ್ಟ್ರದ ಕಲ್ಪನೆಗೆ ಇನ್ನಷ್ಟು ಪ್ರಚೋದನೆ ಸಿಕ್ಕಿ ಈ ರಾಜ್ಯಗಳ ಸ್ಥಳೀಯರೂ, ಅಲ್ಪಸಂಖ್ಯಾತರೂ ಮತ್ತಷ್ಟು ಕಂಗೆಡುವಂತಾಗಿದೆ. ಭಾರತದ ಇತರ ಪ್ರದೇಶಗಳಿಂದ ಬಂದ ಕೆಲವು ಜನರು 'ಆನಂದಮಾರ್ಗ', 'ಅಮ್ರಾಬಂಗಾಳಿ' ಮುಂತಾದ ಪ್ರತಿಗಾಮಿ ಸಂಸ್ಥೆಗಳ ಪ್ರಭಾವಕ್ಕೆ ಸಿಲುಕಿ ಈ ರಾಜ್ಯಗಳ ಜನರೊಳಗಿನ ಸೌಹಾರ್ದತೆಯನ್ನು ಕೆಡಿಸಿದೆ. ಇಂತಹ ಗೊಂದಲಮಯ ಪರಿಸ್ಥಿತಿಯಲ್ಲಿ ಸಿ. ಐ. ಎ. ಕೆಲವು ಕ್ರಿಶ್ಚಿಯನ್ ಮಿಶನರಿಗಳ ಮೂಲಕ ಚುರುಕಾಗಿ ಕೆಲಸಮಾಡುತ್ತಿದ್ದು, ಈ ರಾಜ್ಯಗಳೆಲ್ಲಾ ಭಾರತದ ಒಕ್ಕೂಟದಿಂದ ಸಿಡಿದು ಪ್ರತ್ಯೇಕವಾಗಿ ಒಂದು ಕ್ರಿಶ್ಚಿಯನ್ ರಾಜ್ಯ ಸ್ಥಾಪಿಸಲು ಪ್ರಚೋದಿಸುತ್ತಿದೆ. ಈಶಾನ್ಯ ಭಾರತದ ಈಗಿನ ವಿದ್ಯಮಾನಗಳು ಭಾರತದ ಒಕ್ಕೂಟಕ್ಕೇ ಒಂದು ಸವಾಲಾಗಿದೆ!

ಸ್ವತಂತ್ರ ಅಸ್ಸಾಂ :

ಅಸ್ಸಾಮಿನಲ್ಲಿ ಮೂರು ದಶಕಗಳಿಂದಲೂ ಮತದಾರರ ಪಟ್ಟಿಯಲ್ಲಿ ಗಣನೀಯ ಪ್ರಮಾಣದಲ್ಲಿ ನೆರೆಯ ದೇಶದಿಂದ ವಲಸೆಬಂದ ವಿದೇಶೀಯರ ಸೇರ್ಪಡೆಯಾಗಿರುವುದೇನೋ ನಿಜ. ಕೇಂದ್ರದಲ್ಲಿ ಮತ್ತು ಈ ರಾಜ್ಯದಲ್ಲಿ ದೀರ್ಘಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರ ಎಲ್ಲಿಯವರೆಗೆ ಅಸ್ಸಾಮಿನ ಮತದಾರರ ಪಟ್ಟಿಯಲ್ಲಿರುವ ವಿದೇಶೀಯರ 'ಓಟು'ಗಳು ತಮ್ಮ ಪಕ್ಷಕ್ಕೇ ಸಿಗುತ್ತಿದ್ದವೋ, ಅಲ್ಲಿಯವರೆಗೆ ಸಮಸ್ಯೆಯ ಕುರಿತು ಸಾಮಾನ್ಯವಾಗಿ ಉದಾಸೀನವಾಗಿಯೇ ಇತ್ತು. ಆದರೆ, 1977ರ ನಂತರದ ಚುನಾವಣೆಗಳಲ್ಲಿ ಅಸ್ಸಾಮಿನಲ್ಲಿ ಸಿ. ಪಿ. ಐ. (ಎಂ) ಮೊದಲಾದ ಎಡಪಕ್ಷಗಳೂ ಪ್ರಜಾಪ್ರಭುತ್ವವಾದಿ ಶಕ್ತಿಗಳೂ ಪ್ರಬಲವಾಗುತ್ತಿರುವುದನ್ನು ಕಂಡು ಕಾಂಗ್ರೆಸ್ ಮತ್ತು ಜನತಾಪಕ್ಷಗಳು ಹೌಹಾರಿದವು. ಪೂರ್ಬಾಂಚಲೀಯ ಲೋಕ ಪರಿಷತ್ (PLP) ಮತ್ತು ಅಸ್ಸಾಂ ಜಾತೀಯ ದಳ (AJD) ಎಂಬ ಎರಡು ಪ್ರಾದೇಶಿಕ ಪಕ್ಷಗಳ ಆಶ್ರಯದಲ್ಲಿ ಸ್ಥಾಪಿತ ಹಿತಾಸಕ್ತಿಗಳು ಒಗ್ಗೂಡಿದವು. ಈ ವರ್ಷದ ಮಧ್ಯದಲ್ಲಿ ನಡೆಯಲಿದ್ದ ಮಂಗೋಲ್ಡೈ ಪಾರ್ಲಿಮೆಂಟ್ ಕ್ಷೇತ್ರದ ಉಪಚುನಾವಣೆಗೆ ಮತದಾರರ ಪಟ್ಟಿಯನ್ನು ಪರಿಷ್ಕರಿಸಬೇಕೆಂದು ಈ ಎರಡು ಪ್ರಾದೇಶಿಕ ಪಕ್ಷಗಳೂ ಅಖಿಳ ಅಸ್ಸಾಂ ವಿದ್ಯಾರ್ಥಿ ಸಂಘವೂ (AASU) ಚಳುವಳಿ ಹೂಡಿದವು. ಮುಂದೆ ಲೋಕಸಭೆಗೆ ದೇಶಾದ್ಯಂತ ಮಧ್ಯಾವಧಿ ಚುನಾವಣೆಯನ್ನು ಘೋಷಿಸಿದಾಗ, ಚಳುವಳಿಯು ಅಸ್ಸಾಂ ರಾಜ್ಯದಾದ್ಯಂತ ಹಬ್ಬಿತು.

ಮತದಾರರ ಪಟ್ಟಿಯನ್ನು ಪರಿಷ್ಕರಿಸಬೇಕೆಂದು ಪ್ರಾರಂಭವಾದ ಈ ಪ್ರಾದೇಶಿಕ ಚಳುವಳಿಯು ಇಂದು ವಿಪರೀತಕ್ಕೆ ಹೋಗಿದೆ. ಚಳುವಳಿಗಾರರು 'ವಿದೇಶಿ'ಯರನ್ನು ಮತದಾರರ ಪಟ್ಟಿಯಿಂದ ತೆಗೆಯಬೇಕೆಂದೂ ಅವ

[6ನೇ ಪುಟ ನೋಡಿ]

ಕಾರ್ಮಿಕ ವಿರೋಧಿ ಜನತಾಪಕ್ಷದ ಚುನಾವಣಾ ಪ್ರಣಾಳಿಕೆ

(ಜನತಾಪಕ್ಷ ಬಿಡುಗಡೆಗೊಳಿಸಿರುವ ಚುನಾವಣಾ ಪ್ರಣಾಳಿಕೆಯನ್ನು ವಿಮರ್ಶಿಸಿ ಕಾಂ. ಬಿ. ಟಿ. ರಣದಿವೆ ಬರೆದಿರುವ ಲೇಖನದ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ.)

ಕಾಂಗ್ರೆಸ್ (ಐ)ನ ಚುನಾವಣಾ ಪ್ರಣಾಳಿಕೆಯಂತೆಯೇ ಜನತಾಪಕ್ಷದ ಪ್ರಣಾಳಿಕೆಯೂ ಪುರಾಣದಿಂದ ತೊಡಗಿ ಪರಿಸರ ವಿಜ್ಞಾನದವರೆಗೆ ಯಾವುದನ್ನೂ ಬಿಟ್ಟಿಲ್ಲ. ಪ್ರಜಾಸತ್ತೆಯ ರಕ್ಷಣೆ, ನಿರುದ್ಯೋಗ ನಿವಾರಣೆ ಮತ್ತು ರೈತಾಪಿ ಜನತೆಗೆ ಸಕಲ ಸವಲತ್ತುಗಳನ್ನೂ ನೀಡಿರುವುದಾಗಿ ಸುಳ್ಳುಸುಳ್ಳೇ ಹೆಗ್ಗಳಿಕೆಪಟ್ಟುಕೊಂಡಿರುವುದು ಜನತಾಪ್ರಣಾಳಿಕೆಯಲ್ಲಿರುವ ಪುರಾಣದ ಅಂಶ. ಜನತಾ ಆಡಳಿತೆಯಲ್ಲಿ ನಡೆಸಲಾದ ಅಸಂಖ್ಯ ಗೋಲಿಬಾರ್ ಪ್ರಕರಣಗಳು, ಕಾರ್ಮಿಕರ ಮೇಲಿನ ದಬ್ಬಾಳಿಕೆ, ಅಲ್ಪಸಂಖ್ಯಾತರ ದಮನ, ಕೋಮುಗಲಭೆಗಳು ಮತ್ತು ಇವುಗಳಲ್ಲಿ ಜನತಾಪಕ್ಷದ ಪ್ರವೃತಿಗಳು ನೇರಹಾಗಿ ಭಾಗವಹಿಸಿದುದು ಇತ್ಯಾದಿಗಳ ಬಗ್ಗೆ ಜನತಾಪ್ರಣಾಳಿಕೆ ಮೌನವಹಿಸಿದೆ. ಈ ಕುರಿತು ಪಶ್ಚಾತ್ತಾಪ ವ್ಯಕ್ತಪಡಿಸುವುದಾಗಲೀ ಕ್ಷಮಾಯಾಚನೆಯನ್ನಾಗಲೀ ಜನತಾಪಕ್ಷ ಮಾಡಿಲ್ಲ. ಬಿಗಡಾಯಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಹಿನ್ನೆಲೆಯಲ್ಲಿ ಜನತಾಪಕ್ಷ ತಾನು ಅಚ್ಚರಿಯುಂಟುಮಾಡುವಂತಹ ಸಾಧನೆಗಳನ್ನು ತನ್ನ ಆಳ್ವಿಕೆಯಲ್ಲಿ ಮಾಡಿತೋರಿಸಿದ್ದೇನೆಂದರೆ ಆ ಪಕ್ಷದ ಉದ್ಧಟತನಯೆಷ್ಟಿದೆಯೆನ್ನುವುದನ್ನು ಅರ್ಥಮಾಡಿಕೊಳ್ಳಬಹುದು.

ಮೂಲಭೂತ ಹಕ್ಕುಗಳ ಪುನಃಸ್ಥಾಪನೆ, ಮೀಸಾರದ್ದತಿ, ಪತ್ರಿಕಾ ಸೆನ್ಸಾರ್ ನಿಯಮಗಳ ವಾಪಸಾತಿ, ರಾಜಕೀಯ ಬಂಧಿತರ ಬಿಡುಗಡೆ ಮತ್ತು ನ್ಯಾಯಾಂಗದ ಸ್ವಾತಂತ್ರ್ಯದ ಸ್ಥಾಪನೆ ಇತ್ಯಾದಿಗಳನ್ನು ತಾನು ಮಾಡಿರುವುದಾಗಿ ಜನತಾಪಕ್ಷ ತನ್ನ ಪ್ರಣಾಳಿಕೆಯಲ್ಲಿ ಹೇಳಿಕೊಂಡಿದೆ. 1977ರಲ್ಲಿ ಇದೇ ಆಶ್ವಾಸನೆಗಳನ್ನು ನೀಡಿ ಅಧಿಕಾರಕ್ಕೆ ಬಂದಿರುವ ಜನತಾಪಕ್ಷ ಅವುಗಳನ್ನು ಈಡೇರಿಸಬೇಕಾದುದು ಅದರ ಕರ್ತವ್ಯವಾಗಿತ್ತು ಹೊರತು ಈ ಸಾಧನೆಗಳೆಲ್ಲ ಜನತಾಪಕ್ಷ ಜನತೆಗೆ ನೀಡಿದ ಬಿಟ್ಟಿ ಉಡುಗೊರೆ ಅಲ್ಲ. ಇಷ್ಟಕ್ಕೂ ಈ ಆಶ್ವಾಸನೆಗಳನ್ನೂ ಸಂಪೂರ್ಣವಾಗಿ ಈಡೇರಿಸಲಾಗಿಲ್ಲ, ಮತ್ತು ಈಡೇರಿಸಲ್ಪಟ್ಟಿರುವ ಕೆಲವನ್ನೂ ಅರೆಮನಸ್ಸಿನಿಂದ ಮಾಡಲಾಗಿದೆ. ಜನತೆಯ ಪ್ರಬಲ ಒತ್ತಾಯವಿಲ್ಲದಿರುತ್ತಿದ್ದರೆ ಇಷ್ಟೂ ಸಾಧ್ಯವಾಗುತ್ತಿರಲಿಲ್ಲ. ಜನತಾ ಸರಕಾರ ಅಧಿಕಾರಕ್ಕೆ ಬಂದ ಒಂದು ವರ್ಷದ ಮೇಲಷ್ಟೆ ಅದು 'ಮೀಸಾ' ಕಾನೂನನ್ನು ಒಲ್ಲದ ಮನಸ್ಸಿನಿಂದ ರದ್ದುಗೊಳಿಸಿದೆ. 'ಮೀಸಾ'ದ ಸ್ಥಾನದಲ್ಲಿ ಸಂವಿಧಾನದಲ್ಲಿನ ಪ್ರತಿಬಂಧಕ ಸ್ಥಾನಬದ್ಧತೆಯ ಕ್ರಮಗಳನ್ನು ಜನತಾ ಸರಕಾರ ಅನುಷ್ಠಾನಕ್ಕೆ ತರಲು ಹವಣಿಸಿದುದನ್ನು ಜನತಾಪ್ರಣಾಳಿಕೆ ಮರೆಮಾಚಿದೆ. ಸಂವಿಧಾನ ತಿದ್ದುಪಡಿ ಮಸೂದೆ ಸಂಸತ್ತಿನಲ್ಲಿ ಚರ್ಚಿಸಲ್ಪಡುತ್ತಿದ್ದಾಗ ನಿವಾರಕ ಸ್ಥಾನಬದ್ಧತಾ ಕ್ರಮಗಳನ್ನು ಕೇಂದ್ರ ಕಾನೂನುಮಂತ್ರಿ ಶಾಂತಿಭೂಷಣ್ ಬಲವಾಗಿ ಸಮರ್ಥಿಸಿಕೊಂಡಿದ್ದರು. ಜನತೆಯ ವಿರುದ್ಧ ಈ ಅಸ್ತ್ರವನ್ನು ಬಳಸಿಕೊಳ್ಳಲು ಸರಕಾರ ಉತ್ಸುಕವಾಗಿತ್ತೆಂಬುದು ಮೊರಾರ್ಜಿದೇಸಾಯಿ ತಾನು ರಾಜಿನಾಮೆ ನೀಡುವ ಮೊದಲು ಮಾಡಿದ್ದ ಭಾಷಣದಿಂದ ಸ್ಪಷ್ಟವಾಗುತ್ತದೆ. ಇಷ್ಟೇ ಅಲ್ಲದೆ ಹಲವಾರು ರಾಜ್ಯಗಳ ಜನತಾ ಸರಕಾರಗಳು 'ಮಿನಿ ಮೀಸಾ', 'ಗೂಂಡಾ ಕಾಯಿದೆ', ವಿಚಾರಣೆಯಿಲ್ಲದೆ ಬಂಧನದಲ್ಲಿರಿಸಿಕೊಳ್ಳಲು ವಿವಿಧ ಕಾನೂನುಗಳು ಮತ್ತು ಗಡೀಪಾರು ಆಜ್ಞೆಮಾಡುವ ಅವಕಾಶ ಇತ್ಯಾದಿಗಳನ್ನು ಧಾರಾಳವಾಗಿ ಬಳಸಿಕೊಂಡಿವೆ.

ಜನತೆಯ ಹಕ್ಕುಗಳ ಮೇಲೆ ಆಕ್ರಮಣ:

'ಉತ್ತರಪ್ರದೇಶ ರಾಜ್ಯವೊಂದರಲ್ಲೇ ಜನತಾ ಆಳ್ವಿಕೆಯಲ್ಲಿ ಮೂವತ್ತಕ್ಕೂ ಹೆಚ್ಚುಬಾರಿ ಜನರ ಮೇಲೆ, ಮುಷ್ಕರನಿರತ ಕಾರ್ಮಿಕರ ಮೇಲೆ ಗೋಲಿಬಾರ್ ನಡೆಸಲಾಗಿದೆ. ಮಧ್ಯಪ್ರದೇಶದ ಬೈಲಾದಿಲ್ಲಾದಲ್ಲಿ ನಡೆದ ಹತ್ಯಾಕಾಂಡ, ಬಿಹಾರ್‌ನಲ್ಲಿ ನಡೆದ ಅಮಾನುಷ ದೌರ್ಜನ್ಯಗಳು, ಹರ್ಯಾನಾದಲ್ಲಿ ಡಾಕ್ಟರುಗಳು, ವೈದ್ಯಕೀಯ ವಿದ್ಯಾರ್ಥಿಗಳು ಮುಂತಾದವರನ್ನು ಹೊಡೆದು, ಬಡಿದು, ಅವರ ಕೈಗೆ ಬೇಡಿತೊಡಿಸಿ ಅವಮಾನಿಸಿದುದು, ಇತ್ಯಾದಿಗಳೆಲ್ಲ ಜನತಾಪಕ್ಷ ಜನತೆಯ ಹಕ್ಕುಗಳನ್ನು ಹೇಗೆ ಗೌರವಿಸಿದೆಯೆಂಬುದಕ್ಕೆ ನಿದರ್ಶನ. ಮೂಲಭೂತ ಹಕ್ಕುಗಳನ್ನು ಮರಳಿ ಸ್ಥಾಪಿಸಿದ್ದೇನೆಂದು ಹೆಗ್ಗಳಿಕೆಪಡುತ್ತಿರುವ ಜನತಾಪಕ್ಷ ಆ ಹಕ್ಕುಗಳನ್ನು ಜನ ಚಲಾಯಿಸಿದಾಗ ಅದಕ್ಕೆ ಜನತಾ ಸರಕಾರ ಎಂತಹ ಪ್ರತಿಕ್ರಿಯೆ ತೋರಿಸಿದೆಯೆನ್ನುವುದನ್ನು ಮರೆತಿದೆ. ಇದೇ ರೀತಿ ಪೋಲೀಸರ ಚಳುವಳಿಯನ್ನೂ ಕ್ರೂರವಾಗಿ ಹತ್ತಿಕ್ಕಲಾಗಿದೆ.

ವಿಷಮ ಪರಿಸ್ಥಿತಿಯ ವೇಳೆ ಕಾರ್ಮಿಕರ ಹಕ್ಕುಗಳ ಮೇಲೆ ನಡೆಸಲಾಗಿದ್ದ ಅತಿಕ್ರಮವನ್ನು ಶಾಶ್ವತಗೊಳಿಸಲು ಕೇಂದ್ರದ ಜನತಾ ಸರಕಾರ ಕೈಗಾರಿಕಾ ಸಂಬಂಧ ಮಸೂದೆಯನ್ನು ಸಿದ್ಧಪಡಿಸಿ ಮುಷ್ಕರಗಳನ್ನು ಕಾನೂನು ಬಾಹಿರಗೊಳಿಸಲು ಪ್ರಯತ್ನಿಸಿತು. ಇದರೊಂದಿಗೇ ಶಿಕ್ಷಕರು, ದಾದಿಯರು, ವೈದ್ಯರು, ಆಸ್ಪತ್ರೆ ಸಿಬ್ಬಂದಿ ಮುಂತಾದವರ ಮುಷ್ಕರಗಳನ್ನು ಶಾಶ್ವತವಾಗಿ ನಿಷೇಧಿಸುವ ಇನ್ನೊಂದುಕಾನೂನನ್ನೂ ಜಾರಿಗೊಳಿಸಲು ಪ್ರಯತ್ನಿಸಲಾಯಿತು. ಮೂಲಭೂತ ಹಕ್ಕುಗಳನ್ನು ಗೌರವಿಸುತ್ತೇನೆನ್ನುತ್ತಿರುವ ಜನತಾಪಕ್ಷದ ಮಾತು ಅದೆಷ್ಟು ಪೊಳ್ಳು ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕಿಲ್ಲ.

ಸಂವಿಧಾನ ತಿದ್ದುಪಡಿ ಮಸೂದೆ:

ನಿರಂಕುಶಾಧಿಕಾರವು ಮತ್ತೆ ತಲೆಯೆತ್ತದಂತೆ ಮಾಡುವ ಸಲುವಾಗಿ ಮೊದಲು ಸೂಚಿಸಲಾಗಿದ್ದ 45 ನೇ ಸಂವಿಧಾನ ತಿದ್ದುಪಡಿ ಮಸೂದೆಯ ಹಲವಾರು ಮಹತ್ವಪೂರ್ಣ ಅಂಶಗಳನ್ನು ಜನತಾ ಸರಕಾರ ಕೈಬಿಟ್ಟಿದೆ. ರಾಜ್ಯಸಭೆಯಲ್ಲಿ ಕಾಂಗ್ರೆಸ್ (ಐ)ಗೆ ಬಹುಮತವಿದ್ದ ಕಾರಣ ಜನತಾಪಕ್ಷ ಅದಕ್ಕೆ ಬೆದರಿದೆ. ಈ ತಿದ್ದುಪಡಿಗಳನ್ನು ಜನತೆಯ ಮುಂದಿರಿಸಲೂ, ಅವುಗಳ ಬೆಂಬಲಕ್ಕೆ ಜನತೆಯನ್ನು ಅಣಿನೆರೆಸಲೂ ಅದು ಪ್ರಯತ್ನಿಸಲೇ ಇಲ್ಲ. ಐದು ವರ್ಷಗಳಕಾಲ ಅಧಿಕಾರದಲ್ಲಿ ಉಳಿಯುವ ಅದರ ಹಂಬಲ ಜನತೆಗೆ ದ್ರೋಹಮಾಡುವಂತೆ ಅದನ್ನು ಪ್ರೇರೇಪಿಸಿದೆ. ಸಂವಿಧಾನದ ಮೂಲ ಚೌಕಟ್ಟಿನಲ್ಲಿ ಮಾರ್ಪಾಟು ಉಂಟುಮಾಡಬೇಕಾದರೆ ಅದನ್ನು ಜನತೆಯ ಮುಂದಿರಿಸಿ ಅವರ ವಿಶ್ವಾಸ ಮತವನ್ನು ಪಡೆಯಬೇಕೆನ್ನುವ ಬೇಡಿಕೆಯನ್ನು ಜನತಾಪಕ್ಷ ಕಾಂಗ್ರೆಸ್ (ಐ)ನ ಬೆದರಿಕೆಗೆ ಮಣಿದು ಕೈಬಿಟ್ಟಿತು. ವಿದೇಶೀ ಆಕ್ರಮಣ ಹೊರತು ಬೇರೆಯಾವ ಪರಿಸ್ಥಿತಿಯಲ್ಲೂ ಆಂತರಿಕ ತುರ್ತುಪರಿಸ್ಥಿತಿ ಘೋಷಿಸುವ ಅವಕಾಶ ನೀಡಬಾರದೆಂದು ನಮ್ಮ ಪಕ್ಷ ಕೇಳಿಕೊಂಡಿದ್ದರೂ ಜನತಾ ಸರಕಾರ ದೇಶದಲ್ಲಿ ಸಶಸ್ತ್ರ ದಂಗೆಯಾದರೆ ರಾಷ್ಟ್ರಾಧ್ಯಕ್ಷರು ತುರ್ತುಪರಿಸ್ಥಿತಿ ಸಾರುವಂತಹ ಅಧಿಕಾರವನ್ನು ಸಂವಿಧಾನದಲ್ಲಿ ಉಳಿಸಿಕೊಂಡಿದೆ. ಪ್ರಜಾಸತ್ತೆಯನ್ನು ಬಲಗೊಳಿಸಲು ಮತ್ತು ವಿಷಮ ಪರಿಸ್ಥಿತಿಯ ಚೌಕಟ್ಟನ್ನು ನಿರ್ಮೂಲಗೊಳಿಸಲು ಸಂವಿಧಾನದ 45ನೇ ತಿದ್ದುಪಡಿ ಜನತಾ ಸರಕಾರಕ್ಕಿದ್ದ ಕೊನೆಯ ಅವಕಾಶವಾಗಿತ್ತು. ಈ ಅವಕಾಶವನ್ನು ಹಾಳುಗೆಡವಿ ಅದು ಕಾಂಗ್ರೆಸ್ ಅಧಿಪತ್ಯದ ಜಾಡಿನಲ್ಲೇ ಸಾಗಬಯಸಿದೆ. ತಾನು ಇನ್ನೊಮ್ಮೆ ಅಧಿಕಾರಕ್ಕೆ ಬಂದು ರಾಜ್ಯಸಭೆಯಲ್ಲೂ ಬಹುಮತಗಳಿಸಲು ಶಕ್ತವಾದರೆ ಸಂವಿಧಾನದ 45ನೇ ತಿದ್ದುಪಡಿಯಲ್ಲಿ ಕೈಬಿಟ್ಟಿರಲಾಗಿರುವ ಅಂಶಗಳನ್ನು ಜಾರಿಗೆ ತರುವುದಾಗಿ ಜನತಾಪಕ್ಷ ಹೇಳಿಕೊಂಡಿದ್ದರೂ ನಿವಾರಕ ಪ್ರತಿಬಂಧಕ ಕ್ರಮಗಳು ಮತ್ತು ತುರ್ತುಪರಿಸ್ಥಿತಿ ಘೋಷಿಸಲು ಅಧ್ಯಕ್ಷರಿಗೆ ಅವಕಾಶ ನೀಡಿರುವುದು ಮುಂತಾದ ಅದರ ಕೃತ್ಯಗಳಿಂದಾಗಿ ಈ ಆಶ್ವಾಸನೆಗಳನ್ನು ನಂಬಲು ಸಾಧ್ಯವಾಗುವುದಿಲ್ಲ. ಮತದಾನದ ವಯಸ್ಸನ್ನು 18 ವರ್ಷಗಳಿಗೆ ಇಳಿಸುವ ಜನತಾ ಸರಕಾರದ ಆಶ್ವಾಸನೆ ಈವರೆಗೂ ಈಡೇರಿಲ್ಲ! ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯದ ತತ್ವವನ್ನೂ ಅದು ಅಂಗೀಕರಿಸಿಲ್ಲ.

ಕೇಂದ್ರ ರಾಜ್ಯ ಸಂಬಂಧಗಳು:

ಬೇರೆ ಬೇರೆ ರಾಜ್ಯಗಳಲ್ಲಿನ ವಿವಿಧ ಪಕ್ಷಗಳ ಮೈತ್ರಿಯನ್ನು ಗಳಿಸಿಕೊಳ್ಳಲು ಇದೀಗಜನತಾಪಕ್ಷದ ಮುಂದಾಳುಗಳು ರಾಜ್ಯಗಳಿಗೆ ಹೆಚ್ಚಿನ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವ ಮಾತಾಡುತ್ತಿದ್ದಾರೆ. ಆದರೆ ಜನತಾಪಕ್ಷದ ಪ್ರಮುಖ ಅಂಗವಾಗಿರುವ ಜನಸಂಘವು ಇನ್ನಷ್ಟು ಅಧಿಕಾರದ ಕೇಂದ್ರೀಕರಣವನ್ನು ಬಯಸಿದೆ. ರಾಜ್ಯಗಳಿಗೆ ಸ್ವಾಯತ್ತತೆ ಅಥವಾ ಹೆಚ್ಚಿನ ಅಧಿಕಾರ ನೀಡುವುದನ್ನು ಜನಸಂಘ ಪ್ರಬಲವಾಗಿ ವಿರೋಧಿಸುತ್ತಿದೆ ಮಾತ್ರವಲ್ಲ, ಈ ಬಗ್ಗೆ ಮಾತುಕತೆ ನಡೆಸುವುದನ್ನೂ ಅದು ಹಲವು ಬಾರಿ ಒಪ್ಪಿರಲಿಲ್ಲ. ಇಂದು ರಾಜ್ಯಗಳಿಗೆ ಹೆಚ್ಚಿನ ಅಧಿಕಾರವನ್ನು ವಿಕೇಂದ್ರೀಕರಿಸಬೇಕೆಂದುಜನತಾಪಕ್ಷ ಹೇಳುತ್ತಿದ್ದರೆ ಅದಕ್ಕೆ ಈ ಪಕ್ಷದ ಪುನಃ ಪರಿವರ್ತನೆಯಾದುದು ಕಾರಣವಲ್ಲ. ಪ್ರಜಾಸತ್ತಾತ್ಮಕ ಚಳುವಳಿಯ ಒತ್ತಾಯದಿಂದಾಗಿ ಮತ್ತು ಕಡೇಪಕ್ಷ ಚುನಾವಣಾ ತಂತ್ರವಾಗಿಯಾದರೂ ಈ ಬೇಡಿಕೆಯನ್ನು ಜನತಾಪಕ್ಷ ತನ್ನ ಪ್ರಣಾಳಿಕೆಯಲ್ಲಿ ಅಳವಡಿಸಿಕೊಳ್ಳಬೇಕಾಯಿತು. ಆದರೆ ಕಾಂಗ್ರೆಸ್ (ಐ) ಔಪಚಾರಿಕವಾಗಿಯಾದರೂ ಈ ಬೇಡಿಕೆಯನ್ನು ತನ್ನ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡಿಲ್ಲ; ಬದಲು ಶಿಕ್ಷಣವನ್ನು ಜಂಟಿಯಾದಿಗೆ ಸೇರ್ಪಡೆಗೊಳಿಸುವ ಮೂಲಕ ಇನ್ನಷ್ಟು ಅಧಿಕಾರದ ಕೇಂದ್ರೀಕರಣವನ್ನು ಬಯಸಿದೆಯೆನ್ನುವುದನ್ನು ಗಮನಿಸಬೇಕು. ಸಾರ್ವಜನಿಕ ಒತ್ತಾಯ ಮತ್ತು ಚುನಾವಣೆಯ ಅಗತ್ಯಗಳಿಂದಾಗಿ ಜನತಾಪಕ್ಷ ಇಂಗ್ಲೀಷನ್ನು ಹೆಚ್ಚುವರಿ ಅಧಿಕೃತ ಭಾಷೆಯಾಗಿ ಸದ್ಯಕ್ಕೆ, ಬೇರೊಂದು ಭಾಷೆ ಎಲ್ಲ ರಾಜ್ಯಗಳಿಗೂ ಸಮ್ಮತವಾಗುವವರೆಗೆ ಉಳಿಸಿಕೊಳ್ಳುವ ಆಶ್ವಾಸನೆಯಿತ್ತಿದೆ. ಜನತಾ ಮುಖಂಡರು ಇಂಗ್ಲೀಷನ್ನಾದರೂ ಉಳಿಸಿಕೊಳ್ಳಬಯಸುತ್ತಾರೆ; ಆದರೆ ಎಲ್ಲಾ ಭಾರತೀಯ ಭಾಷೆಗಳಿಗೆ ಸಮಾನ ಅಂತಸ್ತನ್ನು ನೀಡಲು ಮಾತ್ರ ಅವರು ಸಿದ್ಧರಿಲ್ಲ.

ಸಾಧನೆಗಳ ಕುರಿತು ಬಡಾಯಿ:

ಯಾವುದೇ ಮಹತ್ತರವಾದ ಸಾಧನೆಗಳನ್ನು ತೋರಿಸಲು ಎರಡುವರೆ ವರ್ಷಗಳ ಅವಧಿ ತೀರಾ ಕಡಿಮೆ ನಿಜ. ಅತ್ಯುತ್ತಮ ರೀತಿಯ ಯೋಜನೆಗಳೂ ಸಾಕಷ್ಟು ಫಲತೋರಿಸಲು ಮೂರು ನಾಲ್ಕು ವರ್ಷಬೇಕಾಗುತ್ತದೆ. ಆದರೆ ಜನತಾಪಕ್ಷ ಎರಡುವರೆ ವರ್ಷಗಳಲ್ಲೇ ಅದ್ಭುತ ಪ್ರಗತಿ ಸಾಧಿಸಿಕೊಂಡಿರುವುದಾಗಿ ಬಡಾಯಿಕೊಚ್ಚಿಕೊಂಡಿದೆ. "ಆರ್ಥಿಕತೆಯನ್ನು ಪುನರುದ್ದೀಪನಗೊಳಿಸಿ, ಬೆಲೆಗಳನ್ನು ಹತೋಟಿಯಲ್ಲಿರಿಸಿ, ಗ್ರಾಮಾಂತರ ಪ್ರದೇಶದಲ್ಲಿ ಅಪಾರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಕೈಗಾರಿಕೋತ್ಪನ್ನಗಳಿಗೂ ಕೃಷಿ ಉತ್ಪನ್ನಗಳಿಗೂ ಅಧಿಕ ಬೇಡಿಕೆ ಬರುವಂತೆ ಜನತಾಪಕ್ಷ ಮಾಡಿದೆ. ಇವುಗಳೆಲ್ಲದರ ಒಟ್ಟು ಫಲಿತಾಂಶ-ಮೊದಲನೆಯದಾಗಿ ತಲಾ ಆದಾಯದ ತೀವ್ರತಮ ಏರಿಕೆ ಮತ್ತು ಎರಡನೆಯದಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳ ಹೆಚ್ಚಳ......ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಯಾವುದೇ ಎರಡು ವರ್ಷಗಳ ಸಾಧನೆ ಜನತಾಪಕ್ಷದ ಆಡಳಿತೆಯ ಎರಡು ವರ್ಷಗಳ ಕಾಲದಲ್ಲಿ ಸಾಧಿಸಲಾದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಅದ್ಭುತ ಸಾಧನೆಗೆ ಸರಿಗಟ್ಟಲಾರದು". ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಇಷ್ಟೆಲ್ಲ ಪವಾಡಸದೃಶ ಪ್ರಗತಿ ಸಾಧಿಸಿರುವ ಜನತಾಪಕ್ಷಕ್ಕೆ ಈ ಬಾರಿ ಚುನಾವಣೆ ಗೆಲ್ಲುವುದು ತುಂಬಾ ಸುಲಭವಾಗಬೇಕಿತ್ತು. ಆದರೆ ಹಾಗೆ ಆಗುತ್ತಿಲ್ಲವಲ್ಲ! ಜನತಾಪಕ್ಷದ ಪ್ರತಿಷ್ಠೆ ಇಷ್ಟೆಲ್ಲ ಏರಿದ್ದಾಗಲೂ ಆ ಪಕ್ಷ ಒಡೆದು ಚೂರಾಗಿಹೋದುದು ಹೇಗೆ?

ಆಹಾರಧಾನ್ಯಗಳ ಉತ್ಪಾದನೆ:

ತನ್ನ ಎರಡುವರ್ಷಗಳ ಆಡಳಿತೆಯಲ್ಲಿ ಆಹಾರಧಾನ್ಯಗಳ ಉತ್ಪಾದನೆ 252 ಮಿಲಿಯ ಟನ್ನುಗಳಷ್ಟಾಗಿದೆ. ಇದಕ್ಕೆ ಸರಕಾರ ಅನುಸರಿಸಿದ್ದ ನೀತಿಯೇ ಕಾರಣವೆಂದು ಜನತಾಪ್ರಣಾಳಿಕೆ ಹೇಳಿಕೊಂಡಿದೆ. ಆಹಾರಧಾನ್ಯದ ಉತ್ಪಾದನೆ ಹೆಚ್ಚಾಗಿರಬಹುದು ಆದರೆ ಇದಕ್ಕೆ ಉತ್ತಮ ಹವಾಗುಣ ಮತ್ತು ಅನುಕೂಲಕರವಾದ ಮಳೆಯೇ ಕಾರಣ ಹೊರತು ಸರಕಾರದ ನೀತಿಯಲ್ಲ. ಈ ರೀತಿಯ ತಾತ್ಕಾಲಿಕ ಹೆಚ್ಚಳ ಈ ಹಿಂದೆಯೂ ಉದಾಹರಣೆಗೆ 1975-76ರ ತುರ್ತುಪರಿಸ್ಥಿತಿಯ ಅವಧಿಯಲ್ಲೂ ಉಂಟಾಗಿತ್ತು. ಈ ಹೆಚ್ಚಳಕ್ಕೆ ಸರಕಾರದ ಧೋರಣೆ ಕಾರಣವಾಗಿದ್ದರೆ ಕೈಗಾರಿಕೋತ್ಪಾದನೆಯಲ್ಲಿ ಸ್ಥಗಿತವುಂಟಾಗುತ್ತಿರಲಿಲ್ಲ; ಆರ್ಥಿಕ ಮುಗ್ಗಟ್ಟು ಸಂಭವಿಸುತ್ತಿರಲಿಲ್ಲ. 1978-79ರ ರಿಸರ್ವ್ ಬ್ಯಾಂಕ್ ವರದಿಯ ಪ್ರಕಾರ, "1978-79ರ ಆರ್ಥಿಕ ಅಭಿವೃದ್ಧಿಯ ಪ್ರಮಾಣದಲ್ಲಿ ಸುಧಾರಣೆ ಅಥವಾ ಅಷ್ಟನ್ನಾದರೂ ಉಳಿಸಿಕೊಳ್ಳಲು ಸದ್ಯಕ್ಕೆ ಸಾಧ್ಯವಾಗಲಾರದು. ಕೈಗಾರಿಕೋತ್ಪಾದನೆಗಳ ಪ್ರಮಾಣದಲ್ಲೂ ಹೆಚ್ಚಳ ಅಸಾಧ್ಯ. ಕಳೆದ ಹಲವು ವರ್ಷಗಳಲ್ಲಿ ಈ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಮಾನತೆಯಿರಲಿಲ್ಲ. ಕೈಗಾರಿಕೋತ್ಪಾದನೆಯ ಪ್ರಮಾಣದಲ್ಲಿ ಹೆಚ್ಚಳವುಂಟಾಗದಿರಲು ನಮ್ಮ ಆರ್ಥಿಕ ಚೌಕಟ್ಟಿನ ದೌರ್ಬಲ್ಯವೇ ಕಾರಣ" ಎನ್ನಲಾಗಿದೆ. ಜನತಾಪಕ್ಷದ ಪವಾಡಸದೃಶ ಆಡಳಿತೆಯಲ್ಲಿ ಅಸ್ವಸ್ಥ ಕೈಗಾರಿಕೆಗಳ ಸಂಖ್ಯೆ ಜಾಸ್ತಿಯಾಗಿದೆ. ಒಂದು ಕೋಟಿ ರೂಪಾಯಿಗಿಂತಲೂ ಅಧಿಕ ಸಾಲವಿರುವ ಅಸ್ವಸ್ಥ ಉದ್ಯಮಗಳ ಸಂಖ್ಯೆ ಸಪ್ಟೆಂಬರ 1977ರಲ್ಲಿ 270 ರಷ್ಟಿದ್ದರೆ 1978ರ ಸಪ್ಟೆಂಬರದ ಹೊತ್ತಿಗೆ ಈ ಸಂಖ್ಯೆ 334ಕ್ಕೆ ಏರಿದೆ.

ಬೆಲೆಯೇರಿಕೆ ಮತ್ತು ಹಣದುಬ್ಬರ:

1972-73ರಲ್ಲಿ ಇಂದಿರಾ ಆಡ

ತೆಯ ವೇಳೆ ಸಗಟು ಬೆಲೆ ಸೂಚ್ಯಾಂಕ 121.5 ಇದ್ದುದು 1976-77ರ ವಿಷಮ ಪರಿಸ್ಥಿತಿಯ ಸಮಯಕ್ಕೆ 182.1ಕ್ಕೆ ಏರಿತ್ತು. ರಿಸರ್ವ್ ಬ್ಯಾಂಕಿನ ಸಮೀಕ್ಷೆಯಂತೆ ಸಗಟುಬೆಲೆ ಸೂಚ್ಯಾಂಕ 1976-77ರಲ್ಲಿ (ಮೂಲ 1970-71=100) 188.7 ಆಗಿತ್ತು. ಜನತಾಪಕ್ಷ ಅಧಿಕಾರಕ್ಕೆ ಬಂದ ಮೇಲೆ ಈ ಸೂಚ್ಯಾಂಕ ಒಮ್ಮೆ ಮಾತ್ರ 1977-78ರಲ್ಲಿ 186.8ಕ್ಕೆ ಅಂದರೆ ತೀರಾ ಅಲ್ಪಪ್ರಮಾಣದಲ್ಲಿ ಕಡಿಮೆಯಾಯಿತು. 1979ರಲ್ಲಿ ಬೆಲೆಸೂಚ್ಯಾಂಕ ಮತ್ತೆ ಏರಲಾರಂಭಿಸಿತು. ಏಪ್ರಿಲ್ 1979ರಲ್ಲಿ 195.8, ಮೇನಲ್ಲಿ 197.9 ಮತ್ತು ಜನತಾ ಸರಕಾರ ರಾಜೀನಾಮೆ ನೀಡುವ ಹೊತ್ತಿಗೆ ಅಂದರೆ ಜುಲೈ 1979 ರಲ್ಲಿ 207.3ಕ್ಕೆ ಬಂದಿತ್ತು. ಇದೇ ರೀತಿ ಆಹಾರ ಧಾನ್ಯಗಳ ಬೆಲೆಸೂಚ್ಯಾಂಕವೂ 1976-77ರಲ್ಲಿ 170.3 ಆಗಿದ್ದರೆ 1977-78ಕ್ಕೆ 172.8 ಮತ್ತು ಜುಲೈ 1979 ರಲ್ಲಿ ಇದು 178.8ಕ್ಕೆ ಏರಿತ್ತು. ಈ ಅಪಾರ ಬೆಲೆಯೇರಿಕೆಗೆ ಏನು ಕಾರಣ? 1977-78ರಲ್ಲಿ ಜನತಾ ಸರಕಾರ ರೂ. 1265 ಕೋಟಿ ಕೊರತೆ ಹಣ ಸೃಷ್ಟಿಸಿದೆ. 1978-79ರಲ್ಲಿ ಇದು ರೂ. 1461 ಕೋಟಿಯಾಗಿದೆ. 1979-80ಕ್ಕೆ ಅಂದಾಜು ಮಾಡಲಾದ ಕೊರತೆ ಆಯವ್ಯಯ ರೂ. 2000 ಕೋಟಿ. ಇಷ್ಟೆಲ್ಲ ಕೊರತೆ ಹಣ ಸೃಷ್ಟಿಸುವ ಮೂಲಕ ಜನತಾ ಸರಕಾರ ಬಂಡವಾಳಗಾರರು, ಭೂಮಾಲಕರು ಮತ್ತು ಸಟ್ಟಾವ್ಯಾಪಾರಿಗಳಿಗೆ ಅಪಾರ ಲಾಭಗಳಿಸುವ ಅವಕಾಶ ಮಾಡಿಕೊಟ್ಟು ಬೆಲೆಗಳನ್ನು ಗಗನಕ್ಕೇರುವಂತೆ ಮಾಡಿದೆ. ಜನತಾಪ್ರಣಾಳಿಕೆ ಇದನ್ನೇ 'ಬೆಲೆಗಳ ಸ್ಥಿರತೆ' ಎನ್ನುತ್ತಿದೆ. ಬಹುಶಃ ಬೆಲೆಗಳ ಸ್ಥಿರತೆಯೆಂದರೆ ಬೆಲೆಗಳನ್ನು ತೀವ್ರವಾಗಿ ಏರಿಸಿ ಅಲ್ಲಿ ಸ್ಥಿರಗೊಳಿಸುವುದೆಂಬ ಅರ್ಥವಿರಬೇಕು!

ಏರುತ್ತಿರುವ ನಿರುದ್ಯೋಗ :

ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ನಿವಾರಣೆಗಾಗಿ ತಾನು ಹಾಕಿಕೊಂಡಿದ್ದ ಯೋಜನೆಗಳ ಬಗ್ಗೆ ಜನತಾ ಪ್ರಣಾಳಿಕೆ ತುಂಬಾ ಜಾಹೀರಾತು ಮಾಡಿಕೊಂಡಿದೆ. ಆದರೆ ಈ ಕುರಿತು ಲಭ್ಯವಿರುವ ಅಂಕಿಸಂಖ್ಯೆಗಳು ಜನತಾ ಪಕ್ಷದ ಹೆಗ್ಗಳಿಕೆಯನ್ನು ಸುಳ್ಳಾಗಿರಿಸುತ್ತಿವೆ. ಜನತಾ ಸರಕಾರಕ್ಕೆ ಗ್ರಾಮಾಂತರ ನಿರುದ್ಯೋಗ ನಿವಾರಣೆಯ ವಿಷಯದಲ್ಲಿ ಪ್ರಾಮಾಣಿಕ ವಿಶ್ವಾಸವಿರಲಿಲ್ಲವೆಂದೇ ಹೇಳಬೇಕಾಗುತ್ತದೆ. ಮಹಾರಾಷ್ಟ್ರ ಸರಕಾರದ ಗ್ರಾಮೀಣ ಉದ್ಯೋಗ ಯೋಜನೆಗೆ ಸರಕಾರ ತಡೆಯೊಡ್ಡಿದುದು ಇದಕ್ಕೊಂದು ಉದಾಹರಣೆ. ನಿರುದ್ಯೋಗಿಗಳ ಸಂಖ್ಯೆಯಲ್ಲಿ ಹೆಚ್ಚಳವುಂಟಾಗುವುದನ್ನು ತಡೆಗಟ್ಟಲಾಗಿದೆಯೆಂದು ಜನತಾ ಸರಕಾರ ಹೇಳಿಕೊಂಡಿರುವುದರಲ್ಲೂ ಅರ್ಥವಿಲ್ಲ. ಸಂಘಟಿತ ಕ್ಷೇತ್ರದಲ್ಲೂ ನಿರುದ್ಯೋಗವನ್ನು ಬಗೆಹರಿಸಲು ಜನತಾ ಸರಕಾರಕ್ಕೆ ಸಾಧ್ಯವಾಗಿಲ್ಲ. 1976-77ರ ವೇಳೆಗೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಾಖಲಾಗಿದ್ದ ನಿರುದ್ಯೋಗಿಗಳ ಸಂಖ್ಯೆ 10.6 ಮಿಲಿಯಗಳಾಗಿದ್ದರೆ 1977-78 ರಲ್ಲಿ ಅದು 11.9 ಮಿಲಿಯಕ್ಕೇರಿತ್ತು. ಫೆಬ್ರವರಿ 1979 ರಲ್ಲಿ ಈ ಸಂಖ್ಯೆ 13.2 ಮಿಲಿಯ ಮತ್ತು ಜುಲೈ 1979 ರಲ್ಲಿ 13.8 ಮಿಲಿಯಗಳಾಗಿತ್ತು. ಜನತಾ ಅಧಿಕಾರಕ್ಕೆ ಬಂದ ಮೇಲೆ ನಿರುದ್ಯೋಗ ಏರಿಕೆಯ ಪ್ರಮಾಣ ಶೇ 30 ರಷ್ಟಾಗಿದೆ. ಜನತಾ ಸರಕಾರದ ನೀತಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಬದಲು ಅದು ಇನ್ನಷ್ಟು ಉಲ್ಬಣಗೊಳ್ಳುವಂತೆ ಮಾಡಿದೆ.

ಭೂಸುಧಾರಣೆ– ಜನತಾ ಸಾಧಿಸಿದ್ದೇನು?

ಭೂಸುಧಾರಣಾಕಾನೂನನ್ನು ಸಂವಿಧಾನದ ಒಂಬತ್ತನೇ ಶೆಡ್ಯೂಲಿನಲ್ಲಿ ಸೇರಿಸುವುದಾಗಿ ಜನತಾಪಕ್ಷದ ಪ್ರಣಾಳಿಕೆ ಹೇಳಿದೆ. "ಭೂಪರಿಮಿತಿ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜನತಾಪಕ್ಷ ನೋಡಿಕೊಳ್ಳುವುದ. ಮತ್ತು ಮುಂದಿನ ಐದು ವರ್ಷಗಳೊಳಗಾಗಿ ಮಿಗತೆ ಭೂಮಿಯನ್ನು ಭೂಹೀನರಿಗೆ ಹಂಚುವುದು" ಎಂದು ಹೇಳಲಾಗಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ಜನತಾ ಸರಕಾರ ಈ ನಿಟ್ಟಿನಲ್ಲಿ ಏನು ಮಾಡಿದೆ ಎನ್ನುವುದೇ ಇಲ್ಲಿರುವ ಮುಖ್ಯ ಪ್ರಶ್ನೆ. ಮಿಗತೆ ಭೂಮಿಯನ್ನು ವಶಪಡಿಸಿಕೊಳ್ಳುವುದಾಗಲೀ ಅದನ್ನು ಭೂಹೀನರಿಗೆ ಹಂಚುವ ಕೆಲಸವಾಗಲೀ ನಡೆಯಲೇ ಇಲ್ಲ. ಒರಿಸ್ಸಾದಂತಹ ರಾಜ್ಯಗಳ ಜನತಾ ಸರಕಾರಗಳು ಭೂಹಿಡುವಳಿಯ ಗರಿಷ್ಠ ಮಿತಿಯನ್ನು ಹೆಚ್ಚಿಸಲು ಉತ್ಸುಕರಾಗಿದ್ದವು. ಕೆಲವು ರಾಜ್ಯ ಸರಕಾರಗಳು ಕಾಂಗ್ರೆಸ್ ಮಾಡಿದ್ದ ಭೂಸುಧಾರಣಾಕಾಯ್ದೆಯನ್ನು ಕೆಡಿಸುವ ಉದ್ದೇಶದಿಂದ ಅವನ್ನು ಪುನಃ ಪರಿಶೀಲಿಸಬೇಕೆಂದೂ ಹೇಳಲಾರಂಭಿಸಿದವು. ಭೂಸುಧಾರಣೆಯ ಪ್ರಶ್ನೆಯಲ್ಲಿ ಜನತಾ ಸರಕಾರ ಎಂದೂ ತನ್ನ ಹಿಂದಿನ ಕಾಂಗ್ರೆಸ್ ಸರಕಾರ ಹಾಕಿದ್ದ ಮಿತಿಯನ್ನು ದಾಟಲು ಪ್ರಯತ್ನಿಸಲಿಲ್ಲ. ಯೋಜನಾ ಆಯೋಗ 215 ಲಕ್ಷ ಎಕರೆಗಳಷ್ಟು ಮಿಗತೆ ಭೂಮಿಯಿದೆಯೆಂದು ಅಂದಾಜು ಮಾಡಿದ್ದರೂ ಜನತಾ ಸರಕಾರ ಈ ಹಿಂದೆ ಇಂದಿರಾ ಸರಕಾರದ ನೌಕರಶಾಹಿಗಳು ಲೆಕ್ಕ ಹಾಕಿದ್ದ 53 ಲಕ್ಷ ಎಕರೆ ಜಮೀನು ಮಾತ್ರ ಮಿಗತೆ ಭೂಮಿಯೆಂದು ಒಪ್ಪಿಕೊಂಡಿತ್ತು. ಜನತಾ ಸರಕಾರಕ್ಕೆ ರೈತರ ಮೇಲಿರುವ ಪ್ರೇಮಕ್ಕೆ ಬೇರೆ ದೃಷ್ಟಾಂತಬೇಕೆ? ಇಷ್ಟೇ ಅಲ್ಲ; ಜನತಾಪಕ್ಷ ಇನ್ನೂ ಏನೇನೋ ಪವಾಡ ಮಾಡಲಿದೆ. ಗ್ರಾಮೀಣ ಉದ್ಯೋಗ ನೀಡಿಕೆ ಯೋಜನೆ. ವಿದ್ಯಾವಂತರಿಗೆ ಉದ್ಯೋಗ ಒಂದು ಕುಟುಂಬದಲ್ಲಿ ಒಬ್ಬನಿಗಾದರೂ ಕೆಲಸ, ಅಂತ್ಯೋದಯ ಕಾರ್ಯಕ್ರಮ, ಒಂದೇ, ಎರಡೇ,–ಜನತಾಪಕ್ಷ ನೀಡಿರುವ ಆಶ್ವಾಸನೆಗಳಿಗೆ ಮಿತಿಯೇ ಇಲ್ಲ. ಇದರಲ್ಲಿ ಒಂದೇ ಆಶ್ಚರ್ಯದ ಸಂಗತಿಯೆಂದರೆ ಭೂಮಾಲಕರಿಂದ ಒಂದಂಗುಲ ಭೂಮಿಯನ್ನೂ ಕಿತ್ತುಕೊಳ್ಳದೆ, ಬಂಡವಾಳಗಾರರ ಒಂದು ಪೈಸೆ ಆದಾಯಕ್ಕೂ ಹಾನಿತರದೆ, ಗುತ್ತೇದಾರಿಗಳಿಗೆ ಏನೇನೂ ತೊಂದರೆಯಾಗದಂತೆ ಜನತಾಪಕ್ಷ ದೊಡ್ಡ ಇಂದ್ರಜಾಲ ಮಾಡಿತೋರಿಸಲಿದೆ! ಬಡತನವನ್ನೂ, ನಿರುದ್ಯೋಗವನ್ನೂ ಹೊಡೆದೋಡಿಸುತ್ತದೆ! ಆದರ ಜೊತೆಗೇ ಬಂಡವಾಳಗಾರರು ಹೆಚ್ಚು ಲಾಭ ಗಳಿಸಲಿದ್ದಾರೆ, ಭೂಮಾಲಕರು ಬೆಳೆಯಲಿದ್ದಾರೆ. ಎಲ್ಲರಿಗೂ ಮಂಗಳವಾಗುತ್ತದೆ! ಇದಕ್ಕಿಂತ ದೊಡ್ಡ ಪವಾಡ ಇನ್ನೇನಾದರೂ ಇದೆಯೆ?

ಕಾರ್ಮಿಕ ವರ್ಗ:

ತನ್ನ ಆಡಳಿತಾವಧಿಯಲ್ಲಿ ಮುಷ್ಕರಗಳನ್ನು ದಮನಿಸಲು 'ಮಿನಿ ಮಿಸಾ' ಕಾನೂನನ್ನು ಅನುಷ್ಠಾನಕ್ಕೆ ತಂದಿದ್ದ ಜನತಾಪಕ್ಷ ಇದೀಗ ಕಾರ್ಮಿಕರಿಗೆ ಮುಷ್ಕರ ಮಾಡುವ ಮತ್ತು ಪ್ರತಿಭಟಿಸುವ ಹಕ್ಕನ್ನು ಕೊಡಮಾಡಿದೆ. ಕಾರ್ಮಿಕರ ವಿವಾದಗಳನ್ನು ಬಗೆಹರಿಸಲು ಪರಿಣಾಮಕಾರಿಯಾದ ವ್ಯವಸ್ಥೆಯೊಂದನ್ನು ಏರ್ಪಡಿಸಲಾಗುವುದಂತೆ. ಜನತಾ ಸರಕಾರ ಜಾರಿಗೆ ತರಲು ಯೋಜಿಸಿದ್ದ ಕೈಗಾರಿಕಾ ಸಂಬಂಧ ಮಸೂದೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಕಾರ್ಮಿಕ ಸಂಘಟನೆಗಳಿಗೆ ಗುಪ್ತಮತದಾನದ ಮೂಲಕ ಮಾನ್ಯತೆ ನೀಡುವ ಬೇಡಿಕೆಯನ್ನೂ ಈಡೇರಿಸಲಾಗದ ಜನತಾಪಕ ಕಾರ್ಮಿಕರ ಒಳಿತಿಗಾಗಿ ಏನು ಮಾಡೀತು? ಕಾರ್ಮಿಕ ವರ್ಗದ ಆರ್ಥಿಕ ಬೇಡಿಕೆಗಳ ವಿಷಯದಲ್ಲಂತೂ ಜನತಾಪ್ರಣಾಳಿಕೆ ಕಾಂಗ್ರೆಸ್ (ಐ)ನ ಪ್ರಣಾಳಿಕೆಗಿಂತ ಹೆಚ್ಚು ಬೇರೆಯಾಗಿಲ್ಲ. ನೌಕರರ ಅಸ್ತಿತ್ವವನ್ನೇ ಅದು ಒಪ್ಪಿಕೊಂಡಂತಿಲ್ಲ. 1977ರಲ್ಲಿ ಜನತಾಪಕ್ಷ ಘೋಷಿಸಿಕೊಂಡಿದ್ದ ಉದ್ದೇಶಗಳೂ ಈಗಿನವೂ ತುಂಬಾ ಬೇರೆಯಾಗಿವೆ. ಇದರ ಅರ್ಥ ಜನತಾಪಕ್ಷ ಮತ್ತೆ ಅಧಿಕಾರಕ್ಕೆ ಬಂದರೆ ಕಾರ್ಮಿಕ ವರ್ಗದ ಮೇಲೆ ದಾಳಿ ಖಂಡಿತ. ಜನತಾ ಪ್ರಣಾಳಿಕೆ ಹೆಚ್ಚು ಕಡಿಮೆ ಭೂತಲಿಂಗಂ ವರದಿಯನ್ನೇ ಆದರಿಸಿಕೊಂಡಿದೆ. ಅಗತ್ಯಾಧಾರಿತ ಕನಿಷ್ಟ ವೇತನದ ಪ್ರಸ್ತಾಪ ಈ ಪ್ರಣಾಳಿಕೆಯಲ್ಲಿಲ್ಲ. ಅದರ ಬದಲು ಏಕಪಕ್ಷೀಯವಾಗಿ ತೀರ್ಮಾನಿಸಲ್ಪಟ್ಟ ಕನಿಷ್ಟ ವೇತನವನ್ನು ಕಾರ್ಮಿಕರ ಮೇಲೆ ಹೇರಲಾಗುವುದು. ಉಳಿದದ್ದನ್ನು ಲಾಠಿಯ ಮುಖಾಂತರ ತೀರ್ಮಾನಿಸಲಾಗುವುದು!

1977ರ ಪ್ರಣಾಳಿಕೆಯಲ್ಲಿ 'ಬೋನಸ್ ಮುಂದೂಡಲ್ಪಟ್ಟ ವೇತನ'ವೆಂದು ಜನತಾಪಕ್ಷ ಒಪ್ಪಿಕೊಂಡಿದ್ದರೂ ಈ ಆಶ್ವಾಸನೆಯಂತೆ ಅದು ನಡೆದುಕೊಳ್ಳಲಿಲ್ಲ. ಮಧುದಂಡವತೆ ರೇಲ್ವೇ ಮಂತ್ರಿಯಾಗಿದ್ದಾಗಲೂ ಅದು ರೇಲ್ವೇ ನೌಕರರಿಗೆ ಬೋನಸ್ ನೀಡಲಿಲ್ಲ. ಕಾರ್ಮಿಕವರ್ಗ ಆಶ್ವಾಸನೆಗಳನ್ನು ಮರೆಯುವುದಿಲ್ಲವೆಂದು ಜನತಾಪಕ್ಷಕ್ಕೆ ಈಗ ಗೊತ್ತಾಗಿದೆ. ಅದಕ್ಕೇ ಅದು ಈ ಬಾರಿ ಬೋನಸ್ ಬಗ್ಗೆ ಚಕಾರವೆತ್ತುತ್ತಿಲ್ಲ. ಕಾರ್ಮಿಕರ ಪ್ರಮುಖ ಬೇಡಿಕೆಗಳ ವಿಷಯದಲ್ಲಿ ಇಷ್ಟೆಲ್ಲ ಅಲಕ್ಷ್ಯ ತೋರಿಸುವ ಜನತಾಪಕ್ಷ ಅಸಂಘಟಿತ ಕಾರ್ಮಿಕರಿಗೆ ಮಾತ್ರ ತುಂಬಾ ಆಮಿಷಗಳನ್ನು ತೋರಿಸಿದೆ. ಅಸಂಘಟಿತ ಕಾರ್ಮಿಕರು ಈ ಆಶ್ವಾಸನೆಗಳನ್ನು ಈಡೇರಿಸುವಂತೆ ಎಂದೂ ಹೋರಾಡಲಾರರು ಎನ್ನುವುದು ಅದಕ್ಕೆ ಚೆನ್ನಾಗಿಗೊತ್ತು. 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ಆಶ್ವಾಸನೆಯ ಬಗ್ಗೆ ಮಾತ್ರ ಜನತಾಪಕ್ಷ ತುಂಬ ಎಚ್ಚರವಹಿಸಬೇಕು. ಏಕೆಂದರೆ ದುಡಿಯುವ ಮಹಿಳೆಯರು ಇದೀಗ ಸಂಘಟಿತರಾಗುತ್ತಿದ್ದಾರೆ. ಈ ಆಶ್ವಾಸನೆಯನ್ನು ಈಡೇರಿಸದಿದ್ದರೆ ಅವರು ಸುಮ್ಮನಿರಲಾರರು!

ಏಕಸ್ವಾಮ್ಯವಾದಿಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳು:

ಸಾಮಾನ್ಯ ಜನರ ಓಟುಗಳಿಸಬೇಕಾಗಿರುವ ಎಲ್ಲ ಬೂರ್ಶ್ವಾ ಪಕ್ಷಗಳೂ ಈಗೀಗ ಏಕಸ್ವಾಮ್ಯವಾದಿಗಳ ವಿರುದ್ಧ ಒಂದೆರಡು ಮಾತು ಬರೆಯಲೇಬೇಕಾಗುತ್ತದೆ. ಜನತಾಪಕ್ಷವೂ ಇದಕ್ಕೆ ಹೊರತಾಗಿಲ್ಲ. ಆದರೆ ಏಕಸ್ವಾಮ್ಯವಾದಿ ಸಂಸ್ಥೆಗಳನ್ನು ರಾಷ್ಟ್ರೀಕರಿಸುವ ವಿಚಾರ ಮಾತ್ರ ಜನತಾಪಕ್ಷದ ಪ್ರಣಾಳಿಕೆಯಲ್ಲಿಲ್ಲ. ಏಕೆಂದರೆ ಅದರ ಆಡಳಿತಾವಧಿಯಲ್ಲಿ ರೂ. 214 ಕೋಟಿ ಮೊತ್ತದ ಕೈಗಾರಿಕೆಗಳನ್ನು ಸ್ಥಾಪಿಸಲು ಬಿರ್ಲಾಗಳಿಗೆ ಮತ್ತು ರೂ. 221 ಕೋಟಿಯ ಒಟ್ಟು ಹತ್ತು ಉದ್ಯಮಗಳನ್ನು ಸ್ಥಾಪಿಸಲು ಟಾಟಾಗೆ ಪರವಾನಗಿ ನೀಡಲಾಗಿದೆ. (ಕಂಪೆನಿ ವ್ಯವಹಾರಗಳ ಖಾತೆ ನವೆಂಬರ್ 28ರಂದು ನೀಡಿದ್ದ ಪತ್ರಿಕಾ ಪ್ರಕಟಣೆ). ಬಹುರಾಷ್ಟ್ರೀಯ ಸಂಸ್ಥೆಗಳ ವಿಷಯದಲ್ಲೂ ಜನತಾಪಕ್ಷ ಮೌನವಹಿಸಿದೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬಿ.ಇ.ಹೆಚ್.ಎಲ್. ಸಂಸ್ಥೆಯನ್ನು ಒತ್ತೆಯಿಡಲು ಪ್ರಯತ್ನಿಸಿದ ಜನತಾಪಕ್ಷ ಅವುಗಳನ್ನು ಹೇಗೆ ತಾನೆ ಟೀಕಿಸೀತು? ಇಂತಹ ಪಕ್ಷವೊಂದು ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ರಕ್ಷಿಸುವುದಂತೆ!

ಅಲ್ಪಸಂಖ್ಯಾತರು ಮತ್ತು ಹರಿಜನರು:

ಧಾರ್ಮಿಕ ಸ್ವಾತಂತ್ರ್ಯ, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ, ಹರಿಜನರಿಗೆ ರಕ್ಷಣೆ ಇತ್ಯಾದಿಗಳನ್ನು ಜನತಾ ಪ್ರಣಾಳಿಕೆ ಹೇಳಿಕೊಂಡಿದೆ. ಅಲಿಘರ್ ವಿಶ್ವವಿದ್ಯಾಲಯದ ಅಲ್ಪಸಂಖ್ಯಾತ ಸ್ವರೂಪವನ್ನು ರಕ್ಷಿಸಲಾಗುವುದೆಂದೂ ಅಲ್ಪಸಂಖ್ಯಾತ ಆಯೋಗವು ಕ್ರಮಬದ್ಧವಾಗಿ ಕಾರ್ಯವೆಸಗುವಂತೆ ಮಾಡಲಾಗುವುದೆಂದೂ ಹೇಳಲಾಗಿದೆ. ಅಲಿಘರ್, ಜಮ್‌ಶೆಡ್‌ಪುರ ಮೊದಲಾದ ಕಡೆ ಕೋಮುವಾರು ಗಲಭೆಗಳನ್ನು ಪ್ರಚೋದಿಸಿದ ಅಥವಾ ಅವುಗಳಲ್ಲಿ ನೇರವಾಗಿ ಭಾಗಿಯಾದ ತನ್ನ ಶಾಸಕರ ವಿರುದ್ಧ ಜನತಾಪಕ್ಷ ಶಿಸ್ತಿನ ಕ್ರಮಕೈಗೊಂಡಿದ್ದರೆ ಈ ಆಶ್ವಾಸನೆಗಳನ್ನು ಸ್ವಲ್ಪವಾದರೂ ನಂಬಬಹುದಿತ್ತೇನೋ. ಆದರೆ ಇದರ ಬದಲು ಜನತಾಪಕ್ಷ, ಅಂತಹ ಶಾಸಕರನ್ನು ಸಂರಕ್ಷಿಸಿದೆ. ಹಾಗಾಗಿ ಕಪಟಿಗಳು ಮತ್ತು ವಂಚಕರನ್ನು ಬಿಟ್ಟರೆ ಮುಸ್ಲಿಂ ಸಮಾಜದ ಯಾರೊಬ್ಬರೂ ಜನತಾ ಪಕ್ಷದ ಈ ಆಶ್ವಾಸನೆಗಳನ್ನು ನಂಬಲಾರರು. ಜನತಾ ಸರಕಾರದ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತ ಆಯೋಗಕ್ಕೆ ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲೇ ಇಲ್ಲ. ಲೋಕಸಭೆಯಲ್ಲಿ ಓ.ಪಿ. ತ್ಯಾಗಿ ಮಂಡಿಸಿದ್ದ ಮತಾಂತರ ವಿರೋಧಿ ಖಾಸಗಿ ಮಸೂದೆಯೊಂದನ್ನು ಇದೇ ಜನತಾಪಕ್ಷ ಒಳಗೊಳಗೇ ಬೆಂಬಲಿಸಿತ್ತೆನ್ನುವುದನ್ನೂ ಇಲ್ಲಿ ನೆನಪಿಡಬೇಕು. ಕಳೆದೆರಡು ವರ್ಷಗಳಲ್ಲಿ ಹರಿಜನರ ಮೇಲೆ ನಡೆದ ಅನೇಕ ದೌರ್ಜನ್ಯಗಳಲ್ಲಿ ಪಾಲುಗೊಂಡವರಿಗೆ ಏನು ಶಿಕ್ಷೆಯಾಗಿದೆ? ಹರಿಜನರ ಮನೆಸುಟ್ಟು ಅವರನ್ನು ಸಜೀವ ದಹನ ಮಾಡಿದ ಪಾತಕಿಗಳ ವಿರುದ್ಧ ಜನತಾ ಸರಕಾರ ಯಾವಕ್ರಮ ಕೈಗೊಂಡಿದೆ? ಹರಿಜನರಿಗಾಗಲೀ ಅಲ್ಪಸಂಖ್ಯಾತರಿಗಾಗಲೀ ಕಾಂಗ್ರೆಸ್ ಆಡಳಿತೆಯಲ್ಲೂ ಭದ್ರತೆಯಿರಲಿಲ್ಲ; ಜನತಾ ಆಡಳಿತೆಯಲ್ಲೂ ಇಲ್ಲ. ಇವರಿಬ್ಬರ ನಡುವೆ ಯಾರನ್ನಾದರೂ ಆರಿಸಿಕೊಳ್ಳುವುದೆಂದರೆ ಹುಲಿ ಮತ್ತು ಕರಡಿಗಳ ಮಧ್ಯೆ ಒಂದನ್ನು ಆರಿಸಿದಂತೆ!

ಆರ್. ಎಸ್. ಎಸ್.-ಜನಸಂಘದ ಕಪಿಮುಷ್ಟಿ:

ಜನತಾಪಕ್ಷದಿಂದ ಒಮ್ಮಿಂದೊಮ್ಮೆಗೆ ನೂರಾರು ಸಂಸತ್ಸದಸ್ಯರು 'ಪಕ್ಷಾಂತರ' ಮಾಡಿದುದು ಏಕೆಂದು ಜನತಾಪ್ರಣಾಳಿಕೆ ವಿವೇಚಿಸುವ ಗೋಜಿಗೇ ಹೋಗಿಲ್ಲ, ಆರೆಸ್ಸೆಸ್-ಜನಸಂಘಗಳು ಪಕ್ಷವನ್ನು ತಮ್ಮ ಕಪಿಮುಷ್ಟಿಯಲ್ಲಿರಿಸಿಕೊಂಡು ಕೇಂದ್ರದಲ್ಲೂ ರಾಜ್ಯಗಳಲ್ಲೂ ಅಧಿಕಾರವನ್ನು ಕಿತ್ತುಕೊಳ್ಳಲು ನಡೆಸಿದ ಷಡ್ಯಂತ್ರವೇ ಜನತಾಪಕ್ಷ ಇಬ್ಭಾಗವಾಗಲು ಕಾರಣವಾಗಿರುವಾಗ ಜನತಾಪಕ್ಷ ಈ ಬಗ್ಗೆ ಆತ್ಮವಿಮರ್ಶೆ ನಡೆಸುವುದಾದರೂ ಹೇಗೆ? ಮೊರಾರ್ಜಿ ದೇಸಾಯಿ ಪ್ರಧಾನಿಯಾಗಿ ಮುಂದುವರಿದಿದ್ದರೆ ಅಥವಾ ಜಗಜೀವನ್‌ರಾಮ್ ಪ್ರಧಾನಿಯಾಗಿ ಪಕ್ಷ ಇನ್ನೂ ಅಧಿಕಾರದಲ್ಲಿ ಮುಂದುವರಿದಿದ್ದರೆ ಆರೆಸ್ಸೆಸ್-ಜನಸಂಘಗಳ ಹೂಟ ಯಶಸ್ವಿಯಾಗುತಿತ್ತು. ಕಳ್ಳತನ ಮಾಡುವಾಗಲೇ ಸಿಕ್ಕಬಿದ್ದ ಕಳ್ಳನಂತೆ ಜನತಾಪಕ್ಷ ಒಮ್ಮೆಗೇ ಆರೆಸ್ಸೆಸ್ ಜೊತೆಗೆ ತನಗೆ ಸಂಬಂಧವಿರುವುದನ್ನು ಅಲ್ಲಗಳೆಯಲಾರಂಭಿಸಿತು. ಜನತಾಪಕ್ಷದ ಜಾತ್ಯತೀತ ಸ್ವರೂಪವನ್ನೂ ಆದಕ್ಕೆ ಆರೆಸ್ಸೆಸ್ ಜೊತೆಗೆ ಸಂಬಂಧವಿಲ್ಲವೆನ್ನುವುದನ್ನೂ ಒತ್ತಿಹೇಳಲು ಜನತಾಪ್ರಣಾಳಿಕೆ ತುಂಬಾ ಪ್ರಯತ್ನಿಸಿದೆ. "ಭಾರತೀಯ ರಾಜಕಾರಣವನ್ನು ಯಾವುದೇ ಒಂದು ಜನವಿಭಾಗದ ಧರ್ಮ, ಭಾಷೆ ಅಥವಾ ಸಂಸ್ಕೃತಿಯೊಂದಿಗೆ ಗುರುತಿಸಲು ಸಾಧ್ಯವಿಲ್ಲ. (ಹಿಂದೂ ರಾಷ್ಟ್ರ) ಪ್ರತ್ಯೇಕತಾ ಧೋರಣೆ ನಮ್ಮ ಮನೋಧರ್ಮಕ್ಕೆ ವಿರುದ್ಧವಾಗಿದೆ; ಸ್ವಾತಂತ್ರ್ಯ ಹೋರಾಟದ ವೇಳೆ ತುಂಬಾ ಕಷ್ಟಪಟ್ಟು ನಾವು ಬೆಳೆಸಿದ್ದ ರಾಷ್ಟ್ರೀಯ ಭಾವೈಕ್ಯಕ್ಕೂ ಇದು ವಿರುದ್ಧವಾಗಿದೆ." ಇಷ್ಟು ಹೇಳಿಬಿಟ್ಟರೆ ದ್ವಂದ್ವ ಸದಸ್ಯತನದ ಪ್ರಶ್ನೆಯನ್ನು ಮರೆತುಬಿಡಬಹುದು. ನಾನಾಜಿದೇಶಮುಖ್ ಆರೆಸ್ಸೆಸ್ ವೇದಿಕೆಯಲ್ಲಿ ಹಿಂದೂ ರಾಷ್ಟ್ರದ ಬಗ್ಗೆ ಭಾಷಣ ಮಾಡಬಹುದು; ಜನತಾ ವೇದಿಕೆಯ ಮೇಲೆ ಚಂದ್ರಶೇಖರ್ ಜೊತೆಗೆ ಜಾತ್ಯತೀತತೆಯ ಬಗ್ಗೆಯೂ ಮಾತಾಡಬಹುದು. ಚಂದ್ರಶೇಖರ್ ಅವರ ರಾಷ್ಟ್ರೀಯ ಮನೋಭಾವಕ್ಕೂ ಇದರಿಂದ ತೃಪ್ತಿಯಾಗುತ್ತದೆ.

ವಿದೇಶಾಂಗ ನೀತಿ :

ವಿದೇಶಾಂಗ ನೀತಿಯ ಪ್ರಶ್ನೆಯಲ್ಲಿ

ಕಾಂಗ್ರೆಸ್ (ಐ) ಪ್ರಣಾಳಿಕೆಗೂ ಜನತಾಪ್ರಣಾಳಿಕೆಗೂ ಹೆಚ್ಚು ವ್ಯತ್ಯಾಸವಿಲ್ಲ. ಅಲಿಪ್ತನೀತಿ, ನೆರೆಹೊರೆಯವರೊಂದಿಗೆ ಮೈತ್ರಿ, ವಿಶ್ವಶಾಂತಿ, ನಿಶ್ಶಸ್ತ್ರೀಕರಣ, ವರ್ಣಬೇಧ ನೀತಿ ಮತ್ತು ವಸಾಹತುಶಾಹಿಗೆ ವಿರೋಧ ಇತ್ಯಾದಿ ಇತ್ಯಾದಿಗಳೆಲ್ಲ ಕೆಲವರು ಭಾವಿಸಿದ್ದಂತೆ ಕಾಂಗ್ರೆಸ್‌ನ ಗುತ್ತಿಗೆಯಲ್ಲ. ಜನತಾ ಪ್ರಣಾಳಿಕೆಯಲ್ಲೂ ಅವೆಲ್ಲ ಇವೆ. ಆದರೆ ಇಸ್ರೇಲಿ ಆಕ್ರಮಣದ ವಿರುದ್ಧ ಅರಬ್ ರಾಷ್ಟ್ರಗಳಿಗೆ ಬೆಂಬಲ ನೀಡುವ ಯಾವ ಸ್ಪಷ್ಟ ಆಶ್ವಾಸನೆಯೂ ಇಲ್ಲ. ಹಾಗೆಯೇ ಕಂಪೂಚಿಯಾದ ಹೊಸ ಸರಕಾರಕ್ಕೆ ಮಾನ್ಯತೆ ನೀಡುವ ಪ್ರಸ್ತಾಪವೂ ಇಲ್ಲ. ಅಣ್ವಸ್ತ್ರ ಸ್ಫೋಟನೆ ಮಾಡದಿರುವ ಬಗ್ಗೆ ಮೊರಾರ್ಜಿದೇಸಾಯಿ ಅಮೇರಿಕಕ್ಕೆ ಶರಣಾಗತಿಯ ಹೇಳಿಕೆ ನೀಡಿದ ನಂತರ ಅಣುಶಕ್ತಿ ಅಭಿವೃದ್ಧಿಯ ಕುರಿತು ಜನತಾ ನೀಡಿರುವ ಆಶ್ವಾಸನೆಗೂ ಅರ್ಥವಿರಲಾರದು.

ಜನತಾ ಪ್ರಣಾಳಿಕೆಯಲ್ಲಿ 'ನಿಜವಾದ ಅಲಿಪ್ತನೀತಿ' ಅನುಸರಿಸಲಾಗುವುದೆಂದು ಹೇಳಲಾಗಿದೆ. ಈ 'ನಿಜವಾದ ಅಲಿಪ್ತನೀತಿ'ಯೆಂದರೇನು? ಬಹುಶಃ ಅಗತ್ಯವೆನಿಸಿದಾಗಲೆಲ್ಲ ಅಮೇರಿಕದ ಕಡೆಗೆ ವಾಲಿಕೊಳ್ಳಲು ಅನುಕೂಲವಾಗುವಂತೆ ಈ ಶಬ್ದವನ್ನು ಬಳಸಿಕೊಳ್ಳಲಾಗಿದೆ. ಮೊರಾರ್ಜಿದೇಸಾಯಿ ಪ್ರಧಾನಿ ಪದವಿಗೇರಿದ ಕೆಲವು ದಿನಗಳಲ್ಲಿ ಭಾರತ ಸೋವಿಯತ್ ಮೈತ್ರಿ ಒಪ್ಪಂದವನ್ನು ರದ್ದುಪಡಿಸಲಾಗುವುದೆಂದೂ ಹೇಳಿದ್ದರು. ಇದು 'ನಿಜವಾದ' ಅಲಿಪ್ತನೀತಿಯ ಮೊದಲ ಹಂತವಿರಬೇಕು. ಆದರೆ ಅಂತರಾಷ್ಟ್ರೀಯ ಪರಿಸ್ಥಿತಿಯ ಕೆಲವು ವಾಸ್ತವಿಕತೆಗಳು ಜನತಾ ಸರಕಾರ ಈ ರೀತಿಯ 'ಸಾಹಸವಾದಿ' ಕ್ರಮ ಕೈಗೊಳ್ಳಲು ಬಿಡಲಾರದಾದವು.

ಜನತಾಪಕ್ಷವನ್ನು ತಿರಸ್ಕರಿಸಿ :

ಜನತಾಪ್ರಣಾಳಿಕೆ ತನ್ನ ಸಾಧನೆಗಳ ಬಗ್ಗೆ ಕೊಚ್ಚಿಕೊಳ್ಳುತ್ತಿರುವಾಗಲೇ 1977ರಲ್ಲಿ ತಾನು ನೀಡಿದ್ದ ಆಶ್ವಾಸನೆಗಳಿಂದ ಹಿಂದೆ ಸರಿದಿದೆ. ಅದು ಕಾರ್ಮಿಕ ವರ್ಗಕ್ಕೆ ವಿರೋಧಿಯಾಗಿದೆ, ರೈತರಿಗೆ ವಂಚನೆ ಮಾಡಿದೆ, ಬಹುರಾಷ್ಟ್ರೀಯ ಸಂಸ್ಥೆಗಳ ಮತ್ತು ಏಕಸ್ವಾಮ್ಯವಾದಿಗಳ ಅಪಾಯವನ್ನು ಅಲಕ್ಷಿಸಿದೆ. ಸಾರ್ವಜನಿಕ ಕ್ಷೇತ್ರವನ್ನು ಖಾಸಗಿಕ್ಷೇತ್ರದ ಮಟ್ಟಕ್ಕೆ ಇಳಿಸುವ ಸನ್ನಾಹ ನಡೆಸಿದೆ. ಹರಿಜನರಿಗೂ ಅಲ್ಪಸಂಖ್ಯಾತರಿಗೂ ಪೊಳ್ಳು ಆಶ್ವಾಸನೆ ಮಾತ್ರ ನೀಡಿದೆ. ಆರ್ಥಿಕ ಮುಗ್ಗಟ್ಟನ್ನು ಎದುರಿಸುವ ಯಾವ ಕಾರ್ಯಕ್ರಮವೂ ಅದರ ಬಳಿ ಇಲ್ಲ. ಜನಸಾಮಾನ್ಯರ ಮೇಲೆ ಅದು ನಡೆಸಿದ ಆಕ್ರಮಣಗಳಿಂದಾಗಿ ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಸರ್ವಾಧಿಕಾರವನ್ನು ವಿರೋಧಿಸುವ ಅದರ ಮಾತುಗಳನ್ನು ನಂಬಲು ಸಾಧ್ಯವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅದು ಆರೆಸ್ಸೆಸ್ ಮತ್ತು ಜನಸಂಘದ ಹಿಡಿತದಲ್ಲಿಯೇ ಇದೆ ಮತ್ತು ಅವುಗಳ ಸಿದ್ಧಾಂತವನ್ನು ವಿರೋಧಿಸಲು ಅಸಮರ್ಥವಾಗಿದೆ. ಸರ್ವಾಧಿಕಾರ ಮತ್ತು ಕೋಮುವಾದದವಿರುದ್ಧ ಹೋರಾಡಬಯಸುವ ಜನತೆ ಜನತಾ ಪಕ್ಷವನ್ನು ಚುನಾವಣೆಯಲ್ಲಿ ತಿರಸ್ಕರಿಸಲೇಬೇಕು.

○

ಅಸ್ಸಾಮಿನ ಗಲಭೆಗಳಲ್ಲಿ ಸಿ.ಐ.ಎ. ಕೈವಾಡ?

[3ನೇ ಪುಟದಿಂದ]

ರನ್ನು ಗಡೀಪಾರು ಮಾಡಬೇಕೆಂದೂ ಒತ್ತಾಯಿಸುತ್ತಿದ್ದಾರೆ. ಅಲ್ಪಸಂಖ್ಯಾತರಾದ ಮುಸ್ಲಿಮರ ಮೇಲೆ ಮತ್ತು ಭಾರತದ ಇತರ ರಾಜ್ಯಗಳಿಂದ (ಪ. ಬಂಗಾಳ, ಬಿಹಾರ, ಮಹಾರಾಷ್ಟ್ರ-ಇತ್ಯಾದಿ) ಬಂದ ಜನರ ಮೇಲೆ ಹಿಂಸಾಕೃತ್ಯಗಳನ್ನು ನಡೆಸುತ್ತಿದ್ದಾರೆ. ಅವರನ್ನೂ ವಿದೇಶೀಯರೆಂದು ತಿಳಿಯುವಂತೆ ಜನರನ್ನು ಪ್ರಚೋದಿಸುತ್ತಾರೆ. ಚುನಾವಣೆಯನ್ನೇ ಮುಂದಕ್ಕೆ ಹಾಕಬೇಕೆಂದು ಒತ್ತಾಯಿಸಿ, ಮತಪಟ್ಟಿಗಳನ್ನು ಅಚ್ಚುಹಾಕಿಸುವುದಕ್ಕೂ ಅಡ್ಡಿ ಉಂಟುಮಾಡುತ್ತಿದ್ದಾರೆ. ಬಂದ್, ಮುಷ್ಕರ, ಗಲಭೆ, ದೊಂಬಿಗಳಿಂದ ಆಸ್ತಿಪಾಸ್ತಿಗಳನ್ನು ನಷ್ಟಮಾಡುತ್ತಿದ್ದಾರೆ, ಹತ್ತಾರು ಜನರನ್ನು ಸಾವಿಗೀಡುಮಾಡುತ್ತಿದ್ದಾರೆ. ಭಾರತದ ಒಕ್ಕೂಟದಿಂದ 'ಅಸ್ಸಾಂ' ಪ್ರತ್ಯೇಕಗೊಂಡು ಒಂದು ಸ್ವತಂತ್ರ ರಾಷ್ಟ್ರವಾಗಬೇಕೆಂದೂ ಜನರನ್ನು ಪ್ರಚೋದಿಸುತ್ತಾರೆ!

ಸಮಯ ಸಾಧಕ ಕಾಂಗ್ರೆಸ್ (ಐ) ಮತ್ತು ಜನತಾ :

ಸುಭದ್ರ ಸರಕಾರವನ್ನು ನೀಡುವ ಆಶ್ವಾಸನೆ ಕೊಡುತ್ತಿರುವ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವೆವು ಎಂದು ಭರವಸೆ ನೀಡುತ್ತಿರುವ ಕಾಂಗ್ರೆಸ್ (ಐ) ಮತ್ತು ಆರೆಸ್ಸೆಸ್-ಜನಸಂಘ ಪ್ರಭಾವಿತ ಜನತಾಪಕ್ಷಗಳು ಮುಂಬರುವ ಚುನಾವಣೆಗಳಲ್ಲಿ ತಾತ್ಕಾಲಿಕ ಲಾಭಗಿಟ್ಟಿಸಲು ಅಸ್ಸಾಮಿನ ಪ್ರತಿಗಾಮಿ ಚಳುವಳಿಗೆ ಬೆಂಬಲಕೊಟ್ಟಿವೆ. ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕೆಂದು ಕರೆಕೊಟ್ಟಿವೆ. ಸಿ. ಐ. ಎ. ಪ್ರೇರಿತ ಪ್ರತ್ಯೇಕತಾ ಹೋರಾಟಕ್ಕೆ ಪ್ರಚೋದನೆ ನೀಡುತ್ತಿವೆ. ಕಮ್ಯುನಿಸ್ಟರು ರಾಷ್ಟ್ರದ್ರೋಹಿಗಳೆಂದೂ ತಾವು ಮಾತ್ರ ರಾಷ್ಟ್ರಭಕ್ತರೆಂದೂ ಸಾರುತ್ತಿರುವ ಈ ಭೂಮಾಲಕ-ಬಂಡವಾಳಶಾಹಿ ಪಕ್ಷಗಳ ಬಣ್ಣ ಬಯಲಾಗುತ್ತಿದೆ.

ಸಿ. ಪಿ. ಐ. (ಎಂ)ನ ಮುನ್ನಡೆ:

ಅಸ್ಸಾಂನಲ್ಲಿ ಈಗ ಜನಪ್ರಿಯವಾಗುತ್ತಿರುವ ಸಿ. ಪಿ. ಐ. (ಎಂ), ಎಸ್. ಎಫ್. ಐ., ಸಿ. ಐ. ಟಿ. ಯು., ಮತ್ತಿತರ ಎಡ ಹಾಗೂ ಪ್ರಜಾಪ್ರಭುತ್ವವಾದಿ ಸಂಘಟನೆಗಳು ಭಾರತದ ಒಕ್ಕೂಟವನ್ನು ಬಲಗೊಳಿಸಬೇಕೆಂದೂ, ಜನರ ಆರ್ಥಿಕ-ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಡಿಸಲು ಪುರೋಗಾಮಿ ಧೋರಣೆಗಳನ್ನು ಕಾರ್ಯಗತಗೊಳಿಸಬೇಕೆಂದೂ, ರಾಜ್ಯಗಳ ಸ್ವಾಯತ್ತತೆಯನ್ನೂ ಎಲ್ಲಾ ಭಾಷೆಗಳನ್ನೂ ಗೌರವಿಸಬೇಕೆಂದೂ, ರಾಜಕೀಯದಿಂದ ಜಾತಿ, ಮತ, ಧರ್ಮಗಳನ್ನು ದೂರವಿರಿಸಬೇಕೆಂದೂ, ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ದುಡಿಯುವ ಜನರೆಲ್ಲರೂ ಒಗ್ಗಟ್ಟಾಗಿ ಪ್ರಜಾಸತ್ತಾತ್ಮಕವಾಗಿ ಸಮಾಜವಾದಿ ಸಮಾಜದ ರಚನೆಗಾಗಿ ಹೋರಾಡಬೇಕೆಂದೂ ಶ್ರಮಿಸುತ್ತಿವೆ.

ಆದರೆ, ಸಿ. ಐ. ಎ. ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಬೆಳೆಯುವುದನ್ನು ಸಹಿಸಲಾರದು. ಆದುದರಿಂದಲೇ, ಅಸ್ಸಾಮಿನ ಸಧ್ಯದ ಚಳುವಳದಲ್ಲಿ ಸಿ. ಪಿ. ಐ. (ಎಂ)., ಎಸ್. ಎಫ್. ಐ., ಸಿ. ಐ. ಟಿ. ಯು., ಕಾರ್ಯಕರ್ತರ ಮೇಲೆ ಹೆಚ್ಚಾಗಿ ಹಿಂಸಾಕೃತ್ಯಗಳು ನಡೆಯುತ್ತಿವೆ ಅಸ್ಸಾಮಿನ ಇಂದಿನ ಪರಿಸ್ಥಿತಿಯು 1972ರ ಪ ಬಂಗಾಳದ ಅರೆಫ್ಯಾಸಿಸ್ಟ ಹಿಂಸಾಕೃತ್ಯಗಳ ಪರಿಸ್ಥಿತಿಯನ್ನೇ ಹೋಲುವುದು ಆಗ ಪ ಬಂಗಾಳದಲ್ಲಿ ನಡೆದಂತೆ, ಈಗ ಅಸ್ಸಾಮಿನಲ್ಲಿಯೂ ಮುಂದಿನ ಚುನಾವಣೆಗಳಲ್ಲಿ ಸ್ಥಾಪಿತ ಹಿತಾಸಕ್ತಿಗಳು ಅಕ್ರಮ ಅತ್ಯಾಚಾರಗಳಿಂದ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಆರಿಸಿಬಾರದಂತೆ ತಡೆಯಲು ಇದೊಂದು ಪೂರ್ವ ಪೀಠಿಕೆ ಎನ್ನಬಹುದು. ಈ ಸವಾಲನ್ನು ಸಿ. ಪಿ. ಐ (ಎಂ)ನ ನೇತೃತ್ವದ ಎಡರಂಗವು ಸಮರ್ಪಕವಾಗಿ ಎದುರಿಸೀತೆಂದು ಭರವಸೆ ಇದೆ. ಅಸ್ಸಾಮಿನಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ವಿಷಯವು ಸರ್ವಪಕ್ಷಗಳೊಳಗೆ ಕೂಡಲೇ ಒಂದು ತೀರ್ಮಾನಕ್ಕೆ ಬರಬೇಕು. ಈ ಸಮಸ್ಯೆಯನ್ನು ಸಿ. ಐ. ಎ., ಪ್ರಾದೇಶಿಕ ಸ್ಥಾಪಿತ ಹಿತಾಸಕ್ತಿಗಳೂ, ಕೋಮುವಾದಿಗಳೂ, ಸರ್ವಾಧಿಕಾರಿ ಶಕ್ತಿಗಳೂ ದುರುಪಯೋಗಿಸದಂತೆ, ಭಾರತದ ಒಕ್ಕೂಟಕ್ಕೆ, ರಾಷ್ಟ್ರೀಯ ಐಕ್ಯಮತ್ಯಕ್ಕೆ ಧಕ್ಕೆಯಾಗದಂತೆ ಜನಜಾಗ್ರತಿ ಉಂಟಾಗಬೇಕು.

●

ನ್ಯಾಯಾಂಗ ತನಿಖೆ ಕಣ್ಣೊರೆಸುವ ತಂತ್ರವಾಗದಿರಲಿ

18.12-79ರ ರಾತ್ರಿ ಮಣಿಪಾಲನ ಎಂ. ಐ. ಟಿ. ಕಾಲೇಜಿನ ವಿದ್ಯಾರ್ಥಿಗಳ ಮೇಲೆ ವಿನಾಕಾರಣ ಅಮಾನುಷವಾಗಿ ಗುಂಡು ಹಾರಿಸಿದ ಪೋಲೀಸ್ ದುಷ್ಕೃತ್ಯವನ್ನು ಕುಂದಾಪುರ ಎಸ್.ಎಫ್.ಐ. ಘಟಕವು ಖಂಡಿಸಿದೆ. ಗೋಲಿಬಾರ್‌ನಲ್ಲಿ ಮರಣ ಹೊಂದಿದ ಶ್ರೀ ಅಮರನಾಥ್ ಶೆಟ್ಟಿ ಮತ್ತು ಗಾಯಗೊಂಡವರ ಬಗ್ಗೆ ಎಸ್. ಎಫ್. ಐ. ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ.

ಪೋಲೀಸ್ ಗೋಲಿಬಾರಿನ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕೆಂದು ಒತ್ತಾಯಿಸಿ ಕುಂದಾಪುರದಲ್ಲಿ ನಡೆದ ಸರದಿ ಉಪವಾಸ ಸತ್ಯಾಗ್ರಹದಲ್ಲಿ ಸ್ಥಳೀಯ ಎಸ್. ಎಫ್. ಐ. ಘಟಕವು ಭಾಗವಹಿಸಿ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ.

ನ್ಯಾಯಾಂಗ ತನಿಖೆ ನಡೆಸಲು ಒಪ್ಪಿರುವ ರಾಜ್ಯ ಸರಕಾರವನ್ನು ಎಸ್. ಎಫ್. ಐ. ಅಭಿನಂದಿಸುತ್ತದೆ. ಜೊತೆಗೆ ನ್ಯಾಯಾಂಗತನಿಖೆ ಬರೇ ಕಣ್ಣೊರೆಸುವ ತಂತ್ರವಾಗದೆ ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯಸಿಗುವಂತಾಗಬೇಕೆಂದೂ ಒತ್ತಾಯಿಸಿದೆ.

●

ಸಿ.ಐ.ಟಿ.ಯು. ಕಾರ್ಯಕರ್ತರ ಮೇಲೆ ಬಿ.ಎಂ.ಎಸ್. ಗೂಂಡಾಗಳ ದಾಳಿ

ಮಧ್ಯ ಪ್ರದೇಶ್ ರಾಜ್ಯದ ಭಿಲಾಯಿ ನಗರದಲ್ಲಿ ತಾ. 18-12-79 ರಂದು ಹೆಚ್.ಎಸ್.ಸಿ.ಎಲ್. ಕಾರ್ಮಿಕರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು.

ಹೆಚ್.ಎಸ್.ಸಿ.ಎಲ್. ಕಾರ್ಮಿಕರ ಸಂಘ, ಭಿಲಾಯ್ ಶಾಖೆಯ ಉಪಾಧ್ಯಕ್ಷ ಕಾಂ. ಕೆ. ಪಿ. ಟಿ. ಪಿಳ್ಳೈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಸಂಘದ ಸಂಘಟನಾ ಕಾರ್ಯದರ್ಶಿ ಕಾಂ. ಸುಬ್ರತಾ ಚಟರ್ಜಿ ಎಲ್ಲರನ್ನೂ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಬಂದಿದ್ದ ಕುದುರೆಮುಖ ಹೆಚ್.ಎಸ್.ಸಿ.ಎಲ್. ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ. ರಾಮದಾಸ್ ಆಚಾರ್ಯ ತಮ್ಮ ಭಾಷಣದಲ್ಲಿ ಸಿ. ಐ. ಟಿ. ಯು. ಕುದುರೆಮುಖ ಪ್ರದೇಶದಲ್ಲಿ ನಡೆಸುತ್ತಿರುವ ಚಟುವಟಿಕೆಗಳನ್ನು ಹಾಗೂ ಹೆಚ್.ಎಸ್.ಸಿ.ಎಲ್ ಆಡಳಿತ ವರ್ಗ ಸಿ.ಐ.ಟಿ.ಯು. ಸಂಘಟನೆಯನ್ನು ಮುರಿಯಲು ನಡೆಸುತ್ತಿರುವ ಪ್ರಯತ್ನಗಳನ್ನು ವಿವರಿಸಿದರು.

ಸಭೆಯು ತಾ.30-10-79ರಂದು ಭಾರತೀಯ ಮಜ್ದೂರ್ ಸಭಾಗೆ ಸೇರಿದ ಕಾರ್ಮಿಕರು, ಆಡಳಿತ ವರ್ಗದ ಬೆಂಬಲದಿಂದ ಸಿ ಐ ಟಿ.ಯು.ಗೆ ಸೇರಿದ ಕಾರ್ಮಿಕರ ಮೇಲೆ ಗೂಂಡಾ ದಾಳಿ ನಡೆಸಿದ್ದನ್ನು ಖಂಡಿಸಲಾಯಿತು. ಪೋಲೀಸರು ವಿನಾ ಕಾರಣ ಲಾಠಿ ಛಾರ್ಜ್ ಮಾಡಿ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸಿರುವುದಲ್ಲದೆ, ತಪ್ಪಿತಸ್ಥರನ್ನು ಇದುವರೆಗೂ ಹಿಡಿದು ಶಿಕ್ಷಿಸದಿರುವುದನ್ನು ಸಹಾ ಖಂಡಿಸಲಾಯಿತು.

ಭಿಲಾಯಿ ನಗರದ ಹೆಚ್.ಎಸ್.ಸಿ.ಎಲ್. ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಎಸ್. ಚಟರ್ಜಿಯವರು ವಂದನಾರ್ಪಣೆ ಮಾಡಿದರು.

○

ರೈಲ್ವೆ ಕಾರ್ಮಿಕರ ಪ್ರದರ್ಶನ

ತಾ. 28-12-1979 ರಂದು ಮೈಸೂರ್ ಸೌತ್ ವರ್ಕ್‌ಶಾಪ್ ವರ್ಕ್ಸ್ ಮ್ಯಾನೇಜರ್ ಆಫೀಸ್ ಮುಂಬಾಗದಲ್ಲಿ ಸದರನ್ ರೈಲ್ವೆ ಮಜ್‌ದೂರ್ ಸಮಿತಿಗೆ ಸೇರಿದ ಸುಮಾರು 700 ಕ್ಕೂ ಹೆಚ್ಚಿನ ಕಾರ್ಮಿಕರು ಈ ಕೆಳಕಂಡ ಮುಖ್ಯ ಬೇಡಿಕೆಗಳ ಈಡೇರಿಕೆಗಾಗಿ ಭಾರಿ ಪ್ರದರ್ಶನವನ್ನೇರ್ಪಡಿಸಿ ಘೋಷಣೆಗಳನ್ನು ಕೂಗಿದರು.

1. ಕೆಲವು ತಿಂಗಳ ಹಿಂದೆ ಸೆಲೆಕ್ಷನ್‌ಗೆ ಕರೆದಿದ್ದ ಅಭ್ಯರ್ಥಿಗಳನ್ನು ಖಲಾಸಿಗಳನ್ನಾಗಿ ಕೂಡಲೇ ನೇಮಕಮಾಡಿ.

2. ತರ್ತುಪರಿಸ್ಥಿತಿ ಸಂದರ್ಭದಲ್ಲಿ ಖಡ್ಡಾಯ ನಿವೃತ್ತಿಗೊಳಗಾದ ಕಾಮ್ರೇಡ್ ರಂಗಸ್ವಾಮಿ ಮತ್ತು ಕಾಮ್ರೇಡ್ ವೆಂಕಟರಮಣರವರನ್ನು ಕೂಡಲೇ ಪುನರ್ನೇಮಕಮಾಡಿ.

3. ಖಲಾಸಿ ನೇಮಕದಲ್ಲಿ ರೈಲ್ವೆ ಕಾರ್ಮಿಕರ ಮಕ್ಕಳಿಗೆ ಆದ್ಯತೆ.

4. ನಗರದಲ್ಲಿರುವ ರೈಲ್ವೆ ನೌಕರರಿಗೆ ನಗರಭತ್ಯ(Cityallowance) ಕೊಡಿ.

5. ರೈಲ್ವೆ ನೌಕರರಿಗೆ ಶೇ. 8.33 ಬೋನಸ್ ನೀಡಿ.

ಇನ್ನೂ ಹಲವು ಸ್ಥಳೀಯ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ವರ್ಕ್ಸ್ ಮ್ಯಾನೇಜರ್‌ಗೆ ಕೊಟ್ಟು ಶೀಘ್ರ ಜಾರಿಗಾಗಿ ಒತ್ತಾಯಿಸಲಾಯ್ತು. ಸಭೆಯನ್ನುದ್ದೇಶಿಸಿ ಕಾಮ್ರೇಡ್ ಕೆ. ಈಶ್ವರರಾವ್, ಪದ್ಮನಾಭರವರು ಮಾತನಾಡಿದರು. ಕಾಮ್ರೇಡ್ ಎನ್. ಲಕ್ಕಯ್ಯನವರು ವಂದನಾರ್ಪಣೆ ಅರ್ಪಿಸಿದರು. ○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಅಭ್ಯರ್ಥಿಗಳ ಪಟ್ಟಿ

	ಕ್ಷೇತ್ರ	ಅಭ್ಯರ್ಥಿ ಹೆಸರು
1.	ಉಡುಮ	ಕೆ. ಪುರುಷೋತ್ತಮನ್
2.	ತ್ರಿಕ್ಕಾರಿಪುರ್	ಪಿ. ಕರುಣಾಕರನ್
3.	ಪಯ್ಯನೂರ್	ಸುಬ್ರಹ್ಮಣ್ಯ ಶೆಣೈ
4.	ತಳಿಪರಂಬ	ಸಿ. ಪಿ. ಮೂಸನ್ ಕುಟ್ಟಿ
5.	ಅಳಿಕೊಡೆ	ಪಿ. ದೇವಟ್ಟಿ
6.	ಕಣ್ಣಾನೂರ್	ಓ. ಭರತನ್
7.	ತಲಚೇರಿ	ಎಂ. ವಿ. ರಾಜಗೋಪಾಲನ್
8.	ಕುತುಪರಂಬ	ಎಂ. ವಿ. ರಾಘವನ್
9.	ಮನನ್ ತೋಡಿ	ಎ. ಗೋಪಾಲನ್
10.	ಕೊಜಿಕೊಡ್-1	ಎನ್. ಚಂದ್ರಶೇಖರ ಕುರುಪ್
11.	ಪೆರಂಬ್ರಾ	ವಿ. ವಿ. ದಕ್ಷಿಣಾಮೂರ್ತಿ
12.	ಬಡಗರ	ಪಿ. ವಿ. ಕುನ್ಹಿಕಣ್ಣನ್
13.	ಕೊಡುವಳ್ಳಿ	ಕೆ. ಮೂಸಾಕುಟ್ಟಿ
14.	ಕ್ವಿಲಾಂಡಿ	ಪಿ. ಕೆ. ಶಂಕರನ್
15.	ಪೊನ್ನಾನಿ	ಶ್ರೀಧರನ್
16.	ಪೆರಿಂತಲಮಣ್ಣ	ಪಳೊಲಿ ಮಹಮದ್‌ಕುಟ್ಟಿ
17.	ಮಲಂಬುಳ	ಈ. ಕೆ. ನಯನಾರ್
18.	ಕುಳಾಲ್‌ಮಂದಂ	ಟಿ. ಕೆ. ಅರುಮುಖನ್
19.	ಅಲತ್ತೂರ್	ಪಿ. ಪಿ. ಕೃಷ್ಣನ್
20.	ಶ್ರೀಕೃಷ್ಣಪುರಂ	ಎಂ. ವಿ. ಕುಂಜು
21.	ಕೊಲ್ಲನ್‌ಕೊಡೆ	ಸಿ. ಪಿ ವಾಸುದೇವ ಮೆನನ್
22.	ವಡಕನ್ ಚೇರಿ	ಎ. ಪದ್ಮನಾಭನ್
23.	ಚೇಲಕ್ಕಾರ	ಕೆ. ಎಸ್. ಶಂಕರನ್
24.	ತ್ರಿಚೂರ್	ಎಂ. ಕೆ. ಕಣ್ಣನ್
25.	ಮಾಲಾ	ಪಾಲ್ ಕೊಕ್ಕಟ್
26.	ಗುರುವಾಯೂರ್	ಸಿ. ಕೆ. ಕಮಾರನ್
27.	ಅಂಕಮಲಿ	ಎ. ಪಿ. ಕುರ್‌ಯನ್
28.	ಫೆರಿಯಂಬವೂರ್	ಪಿ. ಆರ್. ಸಿವನ್
29.	ತ್ರಿಪ್ಪೂನಿತುರ	ಟಿ. ಕೆ. ರಾಮಕೃಷ್ಣ
30.	ವಡಕ್ಕಕ್ಕಾರ	ಟಿ. ಕೆ. ಅಬ್ದು
31.	ಕುನ್ನತ್ತುಮನ್‌ನಾಡು	ಪಿ. ಪಿ ಎಸ್ತೋಸೆ
32.	ಎರ್ನಾಕುಲಂ	ಕೆ. ಎನ್. ರವೀಂದ್ರನಾಥ್
33.	ನರಕ್ಕಲ್	ಎಂ. ಕೆ ಕೃಷ್ಣನ್
34.	ದೇವಿಕುಳಂ	ಜಿ. ವರದನ್
35.	ಕೊಟ್ಟಾಯಂ	ಕೆ. ಎಂ. ಅಬ್ರಾಹಂ
36.	ಎತ್ತುಮನೂರ್	ವೈಕೊಂ ವಿಶ್ವನಾಥನ್
37.	ಅರೂರ್	ಕೆ. ಆರ್. ಗೌರಿ
38.	ಅಂಬಲಪುಳ	ಪಿ. ಕೆ. ಚಂದ್ರಾನಂದನ್
39.	ಕುಟ್ಟವಾಡ್	ಕೆ. ಪಿ. ಜೊಸೆಫ್
40.	ಹರಿಪ್ಪಾದ್	ಸಿ. ಬಿ. ಸಿ. ವಾರಿಯರ್
41.	ಮಾವಳಿಕ್ಕಾರ	ಎಸ್. ಗೋವಿಂದ ಕುರುಪ್
42.	ಕುಂದರ	ವಿ. ವಿ. ಜೊಸೆಫ್
43.	ಕೊನ್ನಿ	ಚಂದ್ರಶೇಖರ ಪಿಳ್ಳೈ
44.	ನಡುವತ್ತೂರ್	ಸಿ. ಕೆ. ತಂಗಪ್ಪನ್
45.	ಅದೂರ್	ಸಿ. ಪಿ. ಕುಮಾರ ಪಿಳ್ಳೈ
46.	ವರ್‌ಕಾಲ	ವರ್‌ಕಾಲ ರಾಧಕೃಷ್ಣ
47.	ವಾಮನಪುರಂ	ಕೊಳಿಯಾನ್‌ಕೊಡೆ ಕೃಷ್ಣನ್ ನಾಯರ್
48.	ತ್ರಿವೇಂಡ್ರಂ ಉತ್ತರ	ಕೆ. ಅನಿರುದ್ಧನ್
49.	ನೆಯ್ಯಾತ್ತಿನ್‌ಕಾರ	ಆರ್. ಪರಮೇಶ್ವರನ್ ನಾಯರ್
50.	ಪಾರಸಾಲ	ಸತ್ಯನೇಸನ್

ಕಾರ್ಮಿಕರಿಗೆ ಪೋಲೀಸರಿಂದ ಕಿರುಕುಳ

ಮೈಸೂರಿನಲ್ಲಿರುವ ಕೇಂದ್ರ ರೇಷ್ಮೆ ಸಂಶೋದನೆ ಮತ್ತು ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 200 ಮಂದಿ ಕೆಲಸಗಾರರು ತಮ್ಮ ನ್ಯಾಯಯುತವಾದ ಬೇಡಿಕೆಗಳ ಈಡೇರಿಕೆಗಾಗಿ ಸಂಘಟಿತರಾಗಿ ಹೋರಾಡಲು ಸಿ. ಐ. ಟಿ. ಯು. ವಿನ ನೇತೃತ್ವದಲ್ಲಿ ಸುಮಾರು ಎರಡು ವರ್ಷಗಳಿಂದ ಕಾರ್ಯಕ್ರಮಗಳನ್ನು ಹಾಕಿ ಹೋರಾಡುತ್ತಾ ಬರುತ್ತಿದ್ದಾರೆ. ಇದರ ಅಂಗವಾಗಿ ಎಲ್ಲಾ ಕಾರ್ಮಿಕರಿಗೂ ದಿನ ಒಂದಕ್ಕೆ 1-00ರೂ. ವೇತನವನ್ನು ಹೆಚ್ಚಿಸುವದಾಗಿ, ಏಪ್ರಿಲ್ 79 ರಿಂದ ಕೊಡುವುದಾಗಿ ಒಪ್ಪಂದ ಮಾಡಿಕೊಂಡು ಅದನ್ನು ಜಾರಿ ಮಾಡಬೇಕಾದರೆ ಕೆಲಸದ ಹೊರೆಯನ್ನು ಕಾರ್ಮಿಕರ ಮೇಲೆ ಹೇರಲು ಪ್ರಯತ್ನಿಸಿದಾಗ ಆಡಳಿತ ವರ್ಗದವರ ಈ ನೀತಿಯನ್ನು ಖಂಡಿಸಿ ಕೆಲಸದ ಹೊರೆಯನ್ನು ಹೊರುವದಕ್ಕೆ ನಿರಾಕರಿಸಿದಾಗ ಆಡಳಿತ ವರ್ಗವು ಈ ಒಪ್ಪಂದವನ್ನು ಇದುವರೆವಿಗೂ ಜಾರಿಗೆ ತಂದಿರುವದಿಲ್ಲ. ಇದರ ವಿಷಯವಾಗಿ ಕೇಂದ್ರ ಮಂತ್ರಿಗಳಾದ ಬಿ. ರಾಚಯ್ಯ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷರಾದ ಬಸವಯ್ಯನವರನ್ನು ನೋಡಿದಾಗಲೂ ಸಹ ಕಾರ್ಮಿಕರಿಗೆನ್ಯಾಯದೊರಕಲಿಲ್ಲ. ಅದರ ಬದಲು ಕಛೇರಿಯ ಮುಂದೆ ಸಭೆ ಸೇರಿದ್ದ ಕಾರ್ಮಿಕರ ಮೇಲೆ ಪೋಲೀಸರಿಂದ ಲಾಠಿ ಪ್ರದರ್ಶನವಾಯಿತು. ದಿನೇದಿನೇ ಆಡಳಿತ ವರ್ಗದವರಿಂದ ಕಿರುಕುಳ ಹೆಚ್ಚಾಯಿತು. ಇವನ್ನು ಪ್ರತಿಭಟಿಸಿ ತಾರೀಖು 26-11-79ರಿಂದ ಕಾರ್ಮಿಕರು 24 ಘಂಟೆಗಳ ಸರದಿ ಉಪವಾಸ ಮುಷ್ಕರವನ್ನು ಆರಂಭಿಸಿದ್ದಾರೆ ಇದರ ಅಂಗವಾಗಿ ತಾ. 25-12-79 ರಂದು ಒಂದು ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಇದರಲ್ಲಿ ಎ ಐ ಟಿ.ಯು ಸಿ. ನಿಂದ ಕಾಂ. ಎಸ್. ಸೋಮಸುಂದರ ಶರ್ಮರವರು ಮಾತನಾಡಿ ಅವರ ಬೆಂಬಲವನ್ನು ವ್ಯಕ್ತಪಡಿಸಿದರು. ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ರೇಷ್ಮೆ ಸಂಶೋದನೆ ಮತ್ತು ತರಬೇತಿ ಸಂಸ್ಥೆಯ ಕೆಲಸಗಾರರ ಸಂಘದ ಅಧ್ಯಕ್ಷರಾದ ಕಾಂ.ಎಂ.ಎನ್. ಉಗ್ರಪ್ಪನವರು ವಹಿಸಿದ್ದರು. ಸಂಘದ ಕಾರ್ಯದರ್ಶಿ ಕಾಂ. ಮಹದೇವು ಸ್ವಾಗತಿಸಿದರು. ಸಿ.ಐ.ಟಿ.ಯು. ಪರವಾಗಿ ಕಾಂ. ಎಂ. ಶೇಖರ್ ಮತ್ತು ಕಾಂ. ಕೆ. ತಿಮ್ಮೇಗೌಡರವರು ಮಾತನಾಡಿದರು. ಕೊನೆಯಲ್ಲಿ ಸಂಘದ ಉಪಾಧ್ಯಕ್ಷರಾದ ಚಿಕ್ಕಮಾದಯ್ಯನವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ●

ಹಮಾಲಿ ಕಾರ್ಮಿಕರ ಸಂಘದ ಪ್ರಥಮ ವಿಜಯ

ಹಮಾಲಿ ಕಾರ್ಮಿಕರ ಸಂಘ ಸ್ಥಾಪನೆಯಾದ ಕೆಲವೇ ದಿನಗಳಲ್ಲಿ ಕಾರ್ಮಿಕರ ಕೆಲವು ತುರ್ತು ಬೇಡಿಕೆಗಳನ್ನು ಮಾನ್ಯ ವರ್ತಕರ ಮತ್ತು ಸಾರ್ವಜನಿಕರ ಮುಂದೆ ಮಂಡಿಸಿ, ಅದರ ಬಗ್ಗೆ ದಿನಸಿ ವರ್ತಕ ಸಂಘದ ಪದಾಧಿಕಾರಿಗಳು ಮತ್ತು ಹಮಾಲಿ ಕಾರ್ಮಿಕರ ಸಂಘದ ಪದಾಧಿಕಾರಿಗಳು ಒಟ್ಟಿಗೆ ಸೇರಿ ಮಾತುಕತೆಗಳನ್ನು ನಡೆಸಿ ವರ್ತಕ ಸಂಘದವರು ಕಾರ್ಮಿಕರ ಬೇಡಿಕೆಗಳ ಬಗ್ಗೆ ಸಹಾನುಭೂತಿ ತೋರಿಸಿ ಶೇಕಡ 70 50 ರಷ್ಟು ಬಡ್ತಿ ಮಾಡಿ ಒಂದು ಒಪ್ಪಂದಕ್ಕೆ ಬಂದಿದೆ. ದಿನಸಿ ವರ್ತಕ ಸಂಘದ ಪರವಾಗಿ ಶ್ರೀಗಳಾದ ಎನ್.ಹೆಚ್. ಜಂಬಪ್ಪ, ಟಿ.ಆರ್. ಅಶ್ವತ್‌ನಾರಾಯಣ್, ದಾವುಶೇಟ್, ಮಹದೇವಪ್ಪ, ಎನ್.ರುದ್ರಪ್ಪ ಬಸವನಗೌಡ ಮುಂತಾದವರು ಮತ್ತು ಕಾರ್ಮಿಕರ ಸಂಘದ ಪರವಾಗಿ ಶ್ರೀಗಳಾದ ಬಿ. ತಿರುಕೊಪ್ಪ, ಕೆ. ಚಂದುಕುಟ್ಟಿ, ಪಿ. ಶಂಕರನಾರಾಯಣ್, ಖಾಸಿಂ ಸಾಬ್, ಯೂಸುಫ್ ಖಾನ್, ವೈ. ಈರಪ್ಪ ಮುಂತಾದವರು ಮಾತುಕತೆಗಳಲ್ಲಿ ಭಾಗವಹಿಸಿದರು. ●

ವಾರ್ಷಿಕ ಮಹಾಸಭೆ

ಮುನ್ನೂರು ಯುವಕ ಮಂಡಲ (ರಿ) ಕುತ್ತಾರಪದವು ಇದರ ವಾರ್ಷಿಕ ಮಹಾಸಭೆಯು ತಾ. 23-12-79 ರಂದು ಶ್ರೀ ಲಕ್ಷ್ಮಣ.ಕೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ವರುಷಕ್ಕೆ ಕಾರ್ಯಕಾರೀ ಸಮಿತಿಗೆ ಪದಾಧಿಕಾರಿಗಳನ್ನಾಗಿ ಶ್ರೀಗಳಾದ ಲಕ್ಷ್ಮಣ.ಕೆ (ಅಧ್ಯಕ್ಷ), ಶ್ರೀನಿವಾಸ.ಕೆ (ಉಪಾಧ್ಯಕ್ಷ), ಕೃಷ್ಣಪ್ಪ.ಕೆ (ಕಾರ್ಯದರ್ಶಿ), ನಿರಂಜನ.ಎಂ (ಸಹ ಕಾರ್ಯದರ್ಶಿ), ರಮಾನಂದಭಟ್ (ಕೋಶಾಧಿಕಾರಿ), ಶೇಖರಮಾನಲ್ ಮತ್ತು ಸುಂದರ. ಕೆ, (ಕ್ರೀಡಾ ನಾಯಕರು) ಹಾಗೂ ಆನಂದ.ಕೆ, ಈಶ್ವರ. ಕೆ, ರಾಘವ. ಕೆ, ಹೊನ್ನಯ್ಯ. ಕೆ, ನಾರಾಯಣ. ಯು, ತಿಮ್ಮಪ್ಪ. ಕೆ, ರಾಘವ. ಎಂ, (ಸದಸ್ಯರು) ಇವರನ್ನು ಆರಿಸಲಾಯಿತು. ಪ್ರಾರಂಭದಲ್ಲಿ ವರದಿಯನ್ನು ಓದಿದ ಕಾರ್ಯದರ್ಶಿಯವರು ಕೊನೆಯಲ್ಲಿ ಧನ್ಯವಾದವನ್ನರ್ಪಿಸಿದರು. ●

ಮೈಕೋ ಕಾರ್ಮಿಕರಿಗೆ ಬೆಂಬಲ

ತಾ. 28-12-79 ರಂದು 4-30 ಕ್ಕೆ ಮೈಸೂರ್ ಕಿರ್ಲೋಸ್ಕರ್ ಕಾರ್ಮಿಕರು, ಸಂಘದ ಮುಖಂಡತ್ವದಲ್ಲಿ ಬೃಹತ್ ಮೆರವಣಿಗೆಯೊಂದಿಗೆ, ಮೈಕೋಕಾರ್ಮಿಕರ ಮುಷ್ಕರಕ್ಕೆ ಬೆಂಬಲ ಸೂಚಿಸಿದರು. ಕಾರ್ಖಾನೆಯ ಗೇಟಿನಿಂದ ಮೆರವಣಿಗೆಯಲ್ಲಿ ಬಂದು, ತಾಲ್ಲೂಕು ಕಛೇರಿ ಮುಂದೆ ಬಂದಾಗ್ಗ ಕಾರ್ಮಿಕ ಮುಖಂಡರಾದ ಸಂಘದ ಹಂಗಾಮಿ ಕಾರ್ಯದರ್ಶಿ ಡಿ. ಸಿ. ಜೋಷಿಯವರು, ಮೈಕೋ ಕಾರ್ಮಿಕರ ಮುಷ್ಕರದ ಹಿನ್ನೆಲೆಯನ್ನು ವಿವರಿಸಿ ತಹಸೀಲ್ದಾರರಿಗೆ ಮನವಿಯನ್ನು ಅರ್ಪಿಸಿದರು. ಬಹುರಾಷ್ಟ್ರೀಯ ಸಂಸ್ಥೆ ಜರ್ಮನಿಯ ಮೈಕೋ ಆಡಳಿತ ವರ್ಗಕ್ಕೆ ಛೀಮಾರಿ ಹಾಕಿ ಸರಕಾರ ಮಧ್ಯಪ್ರವೇಶಿಸಲು, ಕಾರ್ಮಿಕರ ನ್ಯಾಯಯುತವಾದ ಹೋರಾಟಕ್ಕೆ ಬೆಂಬಲಸೂಚಿಸಿ, ತಹಸೀಲ್ದಾರರ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿಯನ್ನು ಕಳಿಸಲು ವಿನಂತಿಸಿಕೊಂಡರು. ಅನಂತರ ಈ ಹಿಂದೆ ಕಾರ್ಖಾನೆಯ ಕಾರ್ಮಿಕರೊಬ್ಬರ ಮೇಲೆ ಸ್ಥಳೀಯ ಇ.ಎಸ್.ಐ.ಸಿ. ಡಾಕ್ಟರರ ಹಲ್ಲೆ ಕಾರ್ಮಿಕನನ್ನು ಹೊಡೆದು ಅವಮಾನಗೊಳಿಸಿದುದನ್ನು ಖಂಡಿಸಲು ಇ.ಎಸ್.ಐ.ಸಿ. ಆಸ್ಪತ್ರೆಗೆ ಮೆರವಣಿಗೆಯು ಘೋಷಣೆಗಳೊಂದಿಗೆ ಹೋದಾಗ್ಗ ಕಾರ್ಮಿಕರನ್ನು ಉದ್ದೇಶಿಸಿ, ಕಾರ್ಮಿಕ ಮುಖಂಡರಾದ ಕೆ. ಎನ್. ನಾರಾಯಣರು, ಡಾಕ್ಟರರ ಲಂಚದ ವ್ಯವಹಾರ ಕಾರ್ಮಿಕನಿಗೆ ಹೊಡೆದು ಅವಮಾನಗೊಳಿಸಿದುದನ್ನು ಖಂಡಿಸಿ, ಹೋರಾಟ ತೀವ್ರಗೊಳಿಸುವುದಾಗಿ ತಿಳಿಸಿದರು. ಡಾಕ್ಟರರು ಬರದೇ ಇದ್ದ ಪ್ರಯುಕ್ತ ಇನ್‌ಸ್ಪೆಕ್ಟರ್ ಮಂದಣ್ಣನವರ ಆಶ್ವಾಸನೆಯೊಂದಿಗೆ, ಕರೆದು ಮಾತನಾಡುವದಾಗಿ ತಿಳಿಸಿದ ನಂತರ ಮೆರವಣಿಗೆಯನ್ನು ಮುಕ್ತಾಯಗೊಳಿಸಲಾಯ್ತು. ●

ಕಾಂಗ್ರೆ ಪಂಚಾಯಿತಿಯ ಛೇರ್ ಮನ್ ಮೇಲೆ ಅವಿಶ್ವಾಸ ಠರಾವು ಸ್ವೀಕೃತ

ಚಿಕ್ಕಲಿಂಗದಳ್ಳಿ (ಹಾವೇರಿ) ದಿನಾಂಕ: 26-12-79 ಹಾವೇರಿ ತಾಲ್ಲೂಕು ಚಿಕ್ಕಲಿಂಗದಳ್ಳಿ, ಉ. ಕನಕಪುರ ಹಾಗೂ ಬಾಕೋಡಿಹಳ್ಳಿ ಗ್ರೂಪ ಗ್ರಾಮ ಪಂಚಾಯಿತಿಯ ಕಾಂಗ್ರೆಸ್ (ಐ) ಪಕ್ಷದ ಛೇರ್ಮನ್‌ರಾದ ಸಂಣಫಕೀರಗೌಡ, ಗಾಜೀಗೌಡ ಇವರ ಮೇಲೆ ಇದೇ ದಿನಾಂಕ 22-12-79ರಂದು ಮಾ. ಬಿ.ಡಿ.ಓ. ಹಾವೇರಿ ಇವರ ಸಮ್ಮುಖದಲ್ಲಿ ಸಭೆ ಸೇರಿ ಅವಿಶ್ವಾಸ ಠರಾವುತಂದು, ಸದರಿ ಮೀಟಿಂಗ್‌ನಲ್ಲಿ ಹಾಜರಿದ್ದ 12 ಜನ ಸದಸ್ಯರಲ್ಲಿ ಗೊತ್ತುವಳಿಯ ಪರವಾಗಿ 9 ಮತಗಳು ಹಾಗೂ ವಿರೋಧವಾಗಿ 3 ಮತಗಳು ಬಿದ್ದದ್ದರಿಂದ ಸದರಿ ಛೇರ್ಮನ್ನರ ಮೇಲೆ ತಂದ ಅವಿಶ್ವಾಸ ಗೊತ್ತುವಳಿ ಸ್ವೀಕೃತವಾಯಿತು. ●

……..ನೂರು ಜನರ ಬಂಧನ

[ಒಂದನೇ ಪುಟದಿಂದ]

ಸೌಧದ ಎದುರಿಗೆ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿ ಒಂದು ತಿಂಗಳಾಗಿದ್ದರೂ ವಿಧಾನಸೌಧಕ್ಕೆ ಆಯ್ಕೆಯಾಗಿ ಹೋದ ಜನತೆಯ ಪ್ರತಿನಿಧಿಗಳೂ ಸಹಾ ವಿಚಾರಿಸುವುದಕ್ಕೆ ಬಂದಿಲ್ಲ. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಬರೀ ಕಾಲಹರಣ ಮಾಡುವುದಲ್ಲಿಯೇ ಇದ್ದಾರೆ.ಈ ಸಂದರ್ಭದಲ್ಲಿಯೇ ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ಚಲನಚಿತ್ರೋತ್ಸವವನ್ನು ಉದ್ಘಾಟಿಸಲು ಶ್ರೀಮತಿ ದೇವಿಕಾರಾಣಿಯವರನ್ನು ಆಹ್ವಾನಿಸಿದ್ದಾರೆ.

ತಾ.3-1-1980ರಂದು ಚಲನಚಿತ್ರೋತ್ಸವವನ್ನು ಉದ್ಘಾಟಿಸಲು ಶ್ರೀಮತಿ ದೇವಿಕಾರಾಣಿಯವರು ಬಂದಾಗ, ಅವರ ನಿಜರೂಪವನ್ನು ಜನತೆಯ ಎದುರಿಗೆ ಬಯಲಿಗೆಳೆಯಲು ಬೆಂಗಳೂರುಜಿಲ್ಲಾ ರೈತಸಂಘ ತೀರ್ಮಾನಿಸಿತ್ತು. ಇದಕ್ಕೆ ಬೆಂಬಲವಾಗಿ ದಲಿತ ಸಂಘರ್ಷ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆ, ಮಹಿಳಾ ಫೆಡರೇಶನ್ ಹಾಗೂ ಪ್ರಗತಿಪರ ಕಲಾವಿದರು ಮತ್ತು ಪತ್ರಿಕೋದ್ಯಮಿಗಳು ನಿಲ್ಲುವುದಾಗಿ ಬೆಂಬಲ ಸಾರಿದರು.

ಪ್ರತಿಭಟನೆಯ ಕಾರ್ಯಕ್ರಮವನ್ನು ತಿಳಿದು ಪೋಲೀಸರು, ಉದ್ಘಾಟನೆ ಕಾರ್ಯಕ್ರಮ ನಡೆಯುವ ಕಪಾಲಿ ಚಿತ್ರಮಂದಿರ, ಅದರ ಸುತ್ತಮುತ್ತಲ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆಯನ್ನು ಹೇರಿ, ಬಲವಾದ ಪೋಲೀಸ್, ಹೋಮ್‌ಗಾರ್ಡ್ಸ್ ಪಹರೆಯನ್ನು ಹಾಕಿದ್ದರು. ದೇವಿಕಾರಾಣಿಯವರ ರಕ್ಷಣೆಗೆ ಬಂದ ಪೋಲಿಸರಸಂಖ್ಯೆಯನ್ನು ನೋಡಿದರೆ. ನಮ್ಮ ದೇಶದಲ್ಲಿ ಆಳುವ ವರ್ಗಗಳು ಶೋಷಕರಿಗೆ ರಕ್ಷಣೆನೀಡಲು ಎಷ್ಟು ಮುತುವರ್ಜಿವಹಿಸುತ್ತಾರೆಂದು ಯಾರಾದರೂ ಸುಲಭವಾಗಿ ಲೆಕ್ಕಹಾಕಬಹುದಿತ್ತು.

ಪೋಲೀಸರುಹಾಗೂ ದಿನಕ್ಕೆ 5ರೂ. ಸಂಬಳಕ್ಕೆ ಬಂದು ಪೋಲೀಸರಿಗಿಂತ ಹೆಚ್ಚಾಗಿ ರೋಪು ಹೊಡೆಯುವ ಹೋಮ್‌ಗಾರ್ಡ್ಸ್‌ಗಳ ಕಾವಲನ್ನು ಭೇದಿಸಿ ತಾ. 3-1-80ರಂದು ಸಂಜೆ ಐದುಗಂಟೆಯಿಂದ ರೈತಸಂಘ, ದಲಿತ ಸಂಘರ್ಷ ಸಮಿತಿ. ಬಂಡಾಯಸಾಹಿತ್ಯ ಸಂಘಟನೆ, ಮಹಿಳಾ ಫೆಡರೇಶನ್, ಬುದ್ಧಿಜೀವಿಗಳು ಹಾಗೂ ಕಲಾವಿದರು ಸೇರಿದಂತೆ ನೂರಕ್ಕೂ ಹೆಚ್ಚು ಜನರು ತಂಡತಂಡವಾಗಿ ಕರಪತ್ರಗಳನ್ನು ತೂರಿ, ಘೋಷಣೆಗಳನ್ನು ಕೂಗಿದಾಗ ಪೋಲೀಸರು ಎಲ್ಲರನ್ನೂ ಬಂಧಿಸಿದರು. ಕಾರ್ಯಕ್ರಮದ ನಾಯಕತ್ವ ವಹಿಸಿದ್ದ ಕಾಂ. ಜಗನ್ನಾಥ್ ಹಾಗೂ ಕಾಂ.ಶ್ರೀನಿವಾಸ್ ಮೊದಲನೇ ತಂಡದಲ್ಲಿದ್ದು ಪ್ರತಿಭಟನೆಯನ್ನು ವ್ಯಕ್ತಪಡಿಸಿದಾಗ ಬಂಧಿಸಲ್ಪಟ್ಟರು. ಹಿಂದೆಯೇ ಒಂದಾದ ಮೇಲೆ ಒಂದರಂತೆ ಆರು ತಂಡಗಳಲ್ಲಿ ಪ್ರತಿಭಟಿಸಿದವರನ್ನೆಲ್ಲಾ ಬಂಧಿಸಲಾಯಿತು. ನೆರೆದಿದ್ದ ಜನತೆ ಪ್ರತಿಭಟನೆ, ಕರಪತ್ರಗಳನ್ನು ನೋಡಿ ಶ್ರೀಮತಿ ದೇವಿಕಾರಾಣಿಯವರ ನಿಜಸ್ವರೂಪವನ್ನು ಕುರಿತು ಚರ್ಚಿಸುವಂತಾಗಿ, ಕಾರ್ಯಕ್ರಮ ಯಶಸ್ವಿಯಾಯಿತು.

ಇನ್ನು ಮೇಲಾದರೂ ಸಂಬಂಧಪಟ್ಟವರುಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಈಗಾಗಲೇ ಅರೆಜೀವವಾಗಿರುವ ಕಾರ್ಮಿಕರಿಗೆ ನ್ಯಾಯ ಕೊಡಿಸುತ್ತಾರೋ ನೋಡೋಣ. ●

ಮೈಕೋ ಕಾರ್ಮಿಕರ ಮಹತ್ತರ ವಿಜಯ

[ಒಂದನೇ ಪುಟದಿಂದ]

ಕಾರ್ಮಿಕರನ್ನು ವಾಪಸು ಕೆಲಸಕ್ಕೆ ತೆಗೆದುಕೊಂಡು ಉಳಿದ ಹದಿನಾಲ್ಕು ಜನ ಕಾರ್ಮಿಕರಿಗೆ ಯಾವ ಸ್ಟಾಂಡಿಂಗ್ ಆರ್ಡರ್ ಇಲ್ಲದಿದ್ದರೂ ಶೇಕಡ 90 ರಷ್ಟು ಸಂಬಳ ಕೊಡಲಾಗುವುದು ಹಾಗೂ ವಿಷಯವನ್ನು ನಾಲ್ಕು ತಿಂಗಳ ಒಳಗಾಗಿ ಇತ್ಯರ್ಥ ಪಡಿಸಲಾಗುವುದು. ಅಗತ್ಯ ಸೇವಾ ವಿಭಾಗದಲ್ಲಿ ವಜಾ ಆಗಿದ್ದ ಹದಿನೈದು ಜನ ಕಾರ್ಮಿಕರನ್ನೂ ಕೆಲಸಕ್ಕೆ ವಾಪಸು ತೆಗೆದುಕೊಳ್ಳಲಾಗಿದೆ.

ಒಬ್ಬ ಕಾರ್ಮಿಕ ಎರಡು ಯಂತ್ರಗಳನ್ನು ನಡೆಸುವುದು ಮುಂತಾದ ಸಮಸ್ಯೆಗಳನ್ನು ಕೆಲಸ ಪ್ರಾರಂಭವಾದ ಮೇಲೆ ಮಾತುಕತೆಗಳ ಮೂಲಕ ಬಗೆಹರಿಸಲಾಗುವುದು. ಮುಷ್ಕರ ಸಮಯದಲ್ಲಿ ಕಾರ್ಮಿಕರಿಗೆ ಹಾನಿಯಾಗಿರುವುದರಿಂದ ಪ್ರತಿಯೊಬ್ಬ ಕಾರ್ಮಿಕನಿಗೆ ರೂ. 300 ಪರಿಹಾರ ಧನ ಸಿಗುತ್ತದೆ.

ಮುಷ್ಕರ ಸಮಯದಲ್ಲಿ ಬೆಂಬಲ ವ್ಯಕ್ತಪಡಿಸಿ, ಸಹಾಯ ಮಾಡಿದ ಎಲ್ಲಾ ವ್ಯಕ್ತಿಗಳಿಗೆ, ರಾಜ್ಯದ ಕಾರ್ಮಿಕ ಸಂಘಟನೆಗಳಿಗೆ, ಸಾಮೂಹಿಕ ಸಂಘಟನೆಗಳ ಮುಖಂಡರಿಗೆ, ಹಾಗೂ ಜನಸಾಮಾನ್ಯರಿಗೆ ಮೈಕೋ ಕಾರ್ಮಿಕರ ಪರವಾಗಿ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

○

ಬಿನಗದಲ್ಲಿ ಕಾರ್ಮಿಕರ ಸಭೆ

ಬಲ್ಲಾಪುರ್ ಇಂಡಸ್ಟ್ರೀಸ್ ಎಂಪ್ಲಾಯೀಸ್ ಯೂನಿಯನ್, ಬಿನಗ, ಕಾರವಾರದ ಸಭೆಯು ದಿನಾಂಕ 27-12-79ರಂದು ಯೂನಿಯನ್ ಆಫೀಸಿನ ಎದುರು ಸಾಯಂಕಾಲದ 5-35ಕ್ಕೆ ಕಾಂ. ಆರ್.ಜಿ. ಸ್ಥಳೇಕರರವರ ಅಧ್ಯಕ್ಷತೆಯಲ್ಲಿ ಸೇರಿತು.

ಮೊಟ್ಟಮೊದಲಿಗೆ ಕಾಂ. ಸಮಿಉಲ್ಲಾರವರು ಮಾತನಾಡಿ ಯೂನಿಯನ್ನಿನ ಮಹತ್ವವೇನು ಮತ್ತು ಯೂನಿಯನ್ನಿನ ಸಂಗಾತಿಗಳಲ್ಲಿ ಪರಸ್ಪರಸಂಬಂಧವು ರಕ್ತ ಸಂಬಂಧಕ್ಕಿಂತಲೂ ಮಹತ್ವಪೂರ್ಣವಾದದು ಮತ್ತು ಅದಕ್ಕೆ ಸರಿಯಾಗಿ ಯೋಗ್ಯ ಮುಖಂಡ ಅವಶ್ಯಕ ಅಷ್ಟೇ ಅಲ್ಲ ಅವನಿಗೆ ರಕ್ಷಿಸುವುದೂ ಯೂನಿಯನ್ನಿನ ಜವಾಬ್ದಾರಿಯಾಗಿರುತ್ತದೆ. ಈ ಬಂಡವಾಳಶಾಹಿ ಸರಕಾರವನ್ನು ಸರ್ವನಾಶಮಾಡಲು ಕಾರ್ಮಿಕರೆಲ್ಲ ಸಂಘಟಿತರಾಗಿ ಹೋರಾಟಕ್ಕಾಗಿ ರಕ್ತಕೊಡಲು ಸಿದ್ಧರಾಗಿರಿ, ಅದಕ್ಕೆ ಉತ್ತರ ಕನ್ನಡ ಜಿಲ್ಲಾ ಕಿಸಾನ್‌ಸಭೆಯೂ ನಿಮಗೆ ಬೆಂಬಲಿಸಲು ಸದಾ ಸಿದ್ಧವಾಗಿದೆ ಎಂದು ನುಡಿದರು.

ಕಾಂ. ಪಿ. ಪಿ. ಗಾಂವಕರ ಮಾತನಾಡಿ. ಎಲ್ಲರೂ ಸಂಘಟನೆಗಾಗಿ ಶ್ರಮವಹಿಸಿ ಈ ಬಂಡವಾಳಶಾಹಿಗಳನ್ನು ಬಗ್ಗುಬಡಿಯೋಣ ಎಂದು ಯೂನಿಯನ್ನಿನ ಪರವಾಗಿ ನುಡಿದರು.

ನಂತರ ಕಾಂ. ಆರ್.ಜಿ. ಸ್ಥಳೇಕರರವರು ಮಾತನಾಡುತ್ತ ಇಂದಿರಾ ಆಡಳಿತದಲ್ಲಿ ಕಾರ್ಮಿಕರಿಗೆ ಆದ ಅನ್ಯಾಯಗಳು ಮತ್ತು ಕಾರ್ಮಿಕರ ಹೋರಾಟಗಳಿಗೆ ನುಚ್ಚುನೂರು ಮಾಡಿದ ಘಟನೆಗಳನ್ನು ತಿಳಿಸಿದರು. ಬೆಲೆಯಿಲ್ಲದ ನೋಟು ಪ್ರಿಂಟ್ ಮಾಡಿ ಬೆಲೆಏರಿಕೆಗೆ ಕಾರಣವಾಗಿದೆ. ಬಂಡವಾಳ ಸರಕಾರದ ಅಡಿಯಲ್ಲಿ ಮೈಕೋ ಕಾರ್ಮಿಕರಿಗೆ ಆದ ಅನ್ಯಾಯ, ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರಿಗಾದಅನ್ಯಾಯಗಳನ್ನು ವಿವರಿಸಿದರು ಕಾರ್ಮಿಕರ ಹೋರಾಟಗಳು ಕೇವಲ ತಮ್ಮ ಬೇಡಿಕೆಗಳಿಗಾಗಿ ಆಗಿರದೆ ನಿಮ್ಮಂತಹ ಅಲ್ಲದೇ ನಿಮಗಿಂತ ಬಡವರಾಗಿರುವ ಹೆಚ್ಚಿಗೆ ಶೋಷಿತರಾಗಿರುವ ರೈತರ ಪರವಾಗಿಯೂ ಆಗಿರಬೇಕು. ರೈತ ಕಾರ್ಮಿಕರ ಐಕ್ಯ ಹೋರಾಟಗಳು ಬೆಳೆದು ಬರಬೇಕು ಎಂದರು.

ಕಾರ್ಮಿಕರ ಮೇಲಾದ ಅನ್ಯಾಯದ ಬಗ್ಗೆ ಇಂದೇ ನೋಟೀಸು ಕಳಿಸಿದ್ದಾಗಿ ಕಾಂ. ಸ್ಥಳೇಕರ್ ಆಶ್ವಾಸನೆ ಕೊಟ್ಟರು.

1. ಹೊಸ ಪ್ಲಾಂಟಿಗೆ ಇದ್ದ ಕಾರ್ಮಿಕರನ್ನು ಬಳಸಿಕೊಂಡರೆ ಅವನಿಗೆ ಸಿಗುವ ಸಂಬಳಕ್ಕಿಂತ 50% ಸಂಬಳ ಹೆಚ್ಚಿಸಲೇ ಬೇಕು. ಇಲ್ಲವಾದರೇ–

2. ಹೊಸ ಪ್ಲಾಂಟಿಗೆ ಬೇರೆ ಹೊಸ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕು.

3. ಹಳೆಯ ಪ್ಲಾಂಟಿನಲ್ಲಿರುವ ಕಾರ್ಮಿಕರನ್ನು ಹೊಸ ಪ್ಲಾಂಟಿಗೆ ಕಳಿಸಿದರೆ– ಅವರ ಸ್ಥಾನಕ್ಕೆ ಹೊಸಬರನ್ನು ತುಂಬಲೇ ಬೇಕು.

4. ಹೊಸ ಪ್ಲಾಂಟಿಗೆ ಹೊಸಬರನ್ನು ನೇಮಿಸಲಿ ಇಲ್ಲ ಹಳೆಯ ಕಾರ್ಮಿಕರನ್ನೇ ನೇಮಿಸಲಿ ಅವರಿಗೆ ಈಗಿರುವ ವೇತನಕ್ಕಿಂತ 50% ಹೆಚ್ಚಿಗೆ ಕೊಡಬೇಕು.

5. ಯಾವುದೇ ಪರಿಸ್ಥಿತಿಯಲ್ಲಿ ಕಾರ್ಮಿಕರ ಮೇಲೆ ವರ್ಕ್‌ಲೋಡ್ ಹೇರಬಾರದು.

6. ಸಣ್ಣ ಪುಟ್ಟ ತಪ್ಪುಗಳಿಗೆ ಸಸ್ಪೆನ್ಷನ್ ಮಾಡುವ ನೀತಿ ಕೈಬಿಡಲೇಬೇಕು.

7. ಸಸ್ಪೆನ್ಷನ್ ಮಾಡಿದ ಯೂನಿಯನ್ನಿನ ಕಾರ್ಯಕರ್ತರನ್ನು ಪುನಃ ತಕರಾರಿಲ್ಲದೇ ನೇಮಿಸಿಕೊಳ್ಳಬೇಕು.

ಒಂದು ವೇಳೆ ಮ್ಯಾನೇಜ್‌ಮೆಂಟ್ ಮತ್ತು ಮಾಲೀಕರು ಈ ಬೇಡಿಕೆಗಳಿಗೆ ಒಪ್ಪಿಕೊಳ್ಳದಿದ್ದರೆ– ಸಂಘಟಿತ ಹೋರಾಟ ಮಾಡಲೇ ಬೇಕು. ಹೊಸ ಪ್ಲಾಂಟಿಗೆ ಹೋಗಲು ಯಾರೂ ಒಪ್ಪಬಾರದು. ವಿರೋಧಿಸಿ ಒಗ್ಗಟ್ಟಿನಿಂದ ಹೋರಾಡಲು ಸಿದ್ಧವಾಗಿರಿ. ಅದಕ್ಕೆ ತಪ್ಪದೇ ನೇತೃತ್ವವಹಿಸುವೆನೆಂದು ಖಡಾಖಂಡಿತವಾಗಿ ನುಡಿದರು.

○

ಪ್ರತಿಭಟನಾ ಸಭೆ

ತಾರೀಖು 22-12-79 ರಂದು ಪಾವಗಡ ತಾಲ್ಲೂಕು ಗೌಡೇಟಿಯಲ್ಲಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಯುವಕ ರೈತರ ಪ್ರತಿಭಟನಾ ಸಭೆ ಏರ್ಪಡಿಸಲಾಗಿತ್ತು.

ಸರ್ಕಾರಕ್ಕೆ ಮುಂಗಾರು ಮಳೆ ಅಭಾವದಿಂದಾಗಿ ಕಂದಾಯ ಸರ್ಕಾರಿ ಸಾಲ ವಸೂಲಿ ರದ್ದತಿ. ನಿವೇಶನಗಳ ಮತ್ತು ಬಂಜರು ಭೂಮಿ ಹಂಚಿಕೆ. ಸೀಮೆಎಣ್ಣೆ ಮತ್ತು ನಿತ್ಯಬಳಕೆ ವಸ್ತುಗಳನ್ನು ನ್ಯಾಯ ಬೆಲೆಯಲ್ಲಿ ಪೂರೈಕೆ ಕೋರಿ ಮನವಿ ಪತ್ರಗಳನ್ನು ಸಹಿ ಸಂಗ್ರಹಿಸಿ ಸಲ್ಲಿಸಲಾಯಿತು.

ಕೆಲವೇ ರಾಜಕೀಯದಳ್ಳಾಳಿಗಳಿಂದ ಗ್ರಾಮದ ಜನತೆಗೆ ಆಗುವ ತೊಂದರೆಯನ್ನು ಪ್ರತಿಭಟಿಸಲಾಗಿ ಭೂಗ್ರಹಣ ಚಳುವಳಿ ಬಗ್ಗೆ ನಾಗರತ್ನಪ್ಪ ಮಾತನಾಡಿದರು.

ಇದೇ ಸಮಾರಂಭದಲ್ಲಿ ಬನಶಂಕರಿ ಯುವಕ ಸಂಘ ಶ್ರೀ ಜಿ. ನಾಗಪ್ಪ ಪಟೇಲರಿಂದ ಉದ್ಘಾಟಿಸಲ್ಪಟ್ಟ ಸಂಘದ ಕಾರ್ಯಕಾರಿ ಸಮಿತಿಗೆ ಜಿ. ಸತ್ಯನಾರಾಯಣ. ಬಿ. ರಾಮಕೃಷ್ಣ, ದೊಡ್ಡಪ್ಪಯ್ಯ, ಮರಿಯಪ್ಪ. ಸಿ. ರಾಚೌಡಪ್ಪ. ಓಬಣ್ಣನಾಯ್ಕರವರನ್ನು ಆಯ್ಕೆ ಮಾಡಲಾಯಿತು. ಕೊನೆಯಲ್ಲಿ ಜಿ. ಸತ್ಯನಾರಾಯಣ ವಂದಿಸಿದರು. ಸಭೆಯ ನಂತರ "ಸಾಮ್ರಾಜ್ಯಶಾಹಿಗಳಿಗೆ, ಜಾತೀಯವಾದಿಗಳಿಗೆ, ಮತ್ತೆ ಅಧಿಕಾರಲಾಲಸೆಗೆ ಹೊರಡುತ್ತಿರುವ ರಾಜಕಾರಣಿಗಳಿಗೆ ಧಿಕ್ಕಾರ" ಎಂದು ಕೂಗುತ್ತ ಮೆರವಣಿಗೆ ನಡೆಯಿತು.

○

ಯಶಸ್ವಿ ದಾಂಡೇಲಿ ಬಂದ್

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಸಿ. ಪಿ. ಎಂ. ಮತ್ತು ಸಿ. ಐ. ಟಿ. ಯು. ಕೊಟ್ಟಂತಹ ದಾಂಡೇಲಿಬಂದ್ ಕರೆಯು ದಾಂಡೇಲಿ ಇತಿಹಾಸದಲ್ಲಿಯೇ ಹೊಸ ಅಧ್ಯಾಯವನ್ನು ಆರಂಭಮಾಡಿತು.

ಜೀವನಾವಶ್ಯಕ ವಸ್ತುಗಳಾದ ಕಟ್ಟಿಗೆ, ಸಕ್ಕರೆ, ಸೀಮೆಎಣ್ಣೆಯಂತಹ ವಸ್ತುಗಳ ಬೆಲೆಏರಿಕೆ ಅಭಾವಗಳನ್ನು ವಿರೋಧಿಸಿ ಅಗತ್ಯ ವಸ್ತುಗಳ ಸರಿಯಾದ ವಿತರಣೆ ಹಾಗೂ ವೆಸ್ಟ್ ಕೋಸ್ಟ್ ಮಿಲ್ಲಿನ ಕಾರ್ಮಿಕರ ಮೂವತ್ತೈದನೆಯ ದಿವಸ ಪಾದಾರ್ಪಣೆ ಮಾಡಿದ ಸಂಪಿಗೆ ಬೆಂಬಲಾರ್ಥವಾಗಿ ಒಂದು ದಿನದ ದಾಂಡೇಲಿ ಬಂದ್ ಹರತಾಳವನ್ನು ಸಂಪೂರ್ಣ ಯಶಸ್ವಿಯಾಗಿ ಆಚರಿಸಲಾಯಿತು.

ಶಾಂತಿಯುತವಾಗಿ ನಡೆದ ಈ ಹರತಾಳದಲ್ಲಿ ಎಲ್ಲಾ ತರದ ಅಂಗಡಿಗಳು, ಸರಕಾರಿ ಕಾರ್ಯಾಲಯಗಳು, ಶಾಲೆಕಾಲೇಜುಗಳು. ಬ್ಯಾಂಕುಗಳು, ಸಾರಿಗೆ ಸಂಪರ್ಕಗಳು, ಚಿತ್ರಮಂದಿರಗಳು, ಎಲ್ಲ ರಾಜಕೀಯ ಪಕ್ಷದ ಚುನಾವಣೆಯ ಪ್ರಚಾರಗಳು ಹಾಗೂ ಇನ್ನಿತರ ಸಂಘಸಂಸ್ಥೆಗಳು ಸಂಪೂರ್ಣವಾಗಿ ಸ್ತಬ್ಧಗೊಂಡವು.

ಈ ಕಾರಣದಿಂದಾಗಿ ದಾಂಡೇಲಿಯಲ್ಲಿ ಸಾರ್ವಜನಿಕರಿಗಲ್ಲದೆಯೇ ಈ ಹರತಾಳದಲ್ಲಿ ಕಾಯಿದೆ ಕಾನೂನು ಪ್ರಕಾರ ಶಾಂತಿಯನ್ನು ಕಾಪಾಡಲು ಬಂದಂತಹ ಪೋಲೀಸ್ ಪೇದೆಗಳಿಗೂ ಸಹ ಹರತಾಳ ಮುಗಿಯುವವರೆವಿಗೂ ಬೀಡಿ, ಚಹಾ, ನೀರು ಊಟದ ಸಲುವಾಗಿ ಬಹಳ ತೊಂದರೆಯನ್ನು ಅನುಭವಿಸುವ ಪ್ರಸಂಗ ಬಂದೊದಗಿತು. ಅಲ್ಲದೆ ಈ ಹರತಾಳದಲ್ಲಿ ನೂರಕ್ಕೂ ಮೇಲಾದ ಸಣ್ಣಪುಟ್ಟ ಮಕ್ಕಳು ಸಿ. ಪಿ. ಎಂ ಜಿಂದಾಬಾದ್, ಸಿ. ಐ. ಟಿ. ಯು. ಜಿಂದಾಬಾದ್ ಎಂಬ ಘೋಷಣೆಯನ್ನು ಕೂಗುತ್ತಾ ಇಡೀ ದಾಂಡೇಲಿಯ ಬೀದಿಬೀದಿಗಳಲ್ಲಿ ಮೆರವಣಿಗೆಯನ್ನು ತೆಗೆದರು.

ದಾಂಡೇಲಿಯ ಎಲ್ಲಾ ವ್ಯಾಪಾರಸ್ಥರು, ನಾಗರಿಕರು, ಬ್ಯಾಂಕ್ ಶಾಖೆಗಳು, ಸಾರಿಗೆ ಸಂಪರ್ಕದಾರರು, ಎಲ್ಲಾ ರಾಜಕೀಯ ಪಕ್ಷದ ಚುನಾವಣೆಯ ಪ್ರಚಾರದಾರರು ಹಾಗೂ ಸಣ್ಣಪುಟ್ಟ ಸಂಘಸಂಸ್ಥೆಗಳು ಸಂಪೂರ್ಣವಾಗಿ ಪ್ರೋತ್ಸಾಹಿಸಿ ಈ ಹರತಾಳವನ್ನು ಯಶಸ್ವಿಯಾಗುವಂತೆ ಸಹಕರಿಸಿದರು.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT